

# ಸಿಹಿ ಕಹಿ

SIHI KAHI

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 163 | Tuesday 04-03-2025 | E-mail : maruti.b.hosamani76@gmail.com | Page: 4 | Price : Rs. 1/-


## ರಿಚ್ ಶಿಕ್ಷಣ ಸಂಸ್ಥೆ ಎತ್ತರಕ್ಕೆ ಬೆಳೆಯಲಿ ಎಂದು ಕಲ್ಮಠ ಪಂಡೀತರಾಧ್ಯ ಸ್ವಾಮೀಜಿಯವರ ಅಭಿಮತ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ನಕ್ಕುಂದಿ ಗ್ರಾಮದಲ್ಲಿ ನೆಲೆಸಿ ಕಷ್ಟದ ಜೀವನದ ನಡುವೆ ನಾವು ಶಾಲೆ ಪ್ರಾರಂಭ ಮಾಡಬೇಕು ಎಂದು ಹುಸೇನ್ ಭಾಷ ಅವರಿಗೆ ಆಲೋಚನೆ ಬಂದ ಹಿನ್ನೆಲೆಯಲ್ಲಿ ರಿಚ್ ಶಿಕ್ಷಣ ಸಂಸ್ಥೆ 6 ನೇ. ವರ್ಷದ ವಾರ್ಷಿಕೋತ್ಸವ ಆಚರಿಸಿ ಕೊಳ್ಳುತ್ತಿರುವುದು ಶ್ಲಾಘನೀಯ ಎಂದು ಮಾನ್ವಿ ಕಲ್ಮಠದ ವಿರೂಪಾಕ್ಷ ಪಂಡೀತರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಮಾನ್ವಿ ಪಟ್ಟಣದ ಸಿಂಧನೂರು ರಸ್ತೆಯಲ್ಲಿರುವ ರಿಚ್ ಶಿಕ್ಷಣ ಸಂಸ್ಥೆಯ 6 ನೇ. ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚು ಅಂಕ ಪಡೆಯಬೇಕು ಸಲಹೆ ನೀಡುತ್ತಾ-ರೆ ವಿನಹ ಅದರ ಜೊತೆಗೆ ಸಂಸ್ಕಾರದ ವಿಚಾರ ತಿಳಿಸಿದಾಗ ನಿಮ್ಮ ಮಕ್ಕಳ ಬಾಳು ಬದಲಾವಣೆ ಯಾಗುತ್ತದೆ ಎಂದರು.

ಪ್ರಸ್ತುತ ದಿನಮಾನದಲ್ಲಿ ನಾವು ನೋಡಿದಾಗ ವಿದ್ಯಾರ್ಥಿಗಳು ಶಿಕ್ಷಣವಂತ ರಾಗುವುದರ ಜೊತೆಗೆ ತಮ್ಮ ಪೋಷಕರು ಯಾವ ರೀತಿಯ ದಿನ ಮಾನದಲ್ಲಿ ಜೀವನದ ಕೆಲ ಬೆಳವಣಿಗೆಗಳನ್ನು ಕೇಳಿದಾಗ ಮಾತ್ರ ನೀವು ಬದಲಾವಣೆ ಯಾಗಲು ಸಾಧ್ಯ ಎಂದು ಮಕ್ಕಳಿಗೆ ತಿಳಿ ಹೇಳಿದರು.

ಹುಸೇನ್ ಭಾಷ ಹಾಗು ನದಾಫ್ ಖಾಜಾಬಿ ಅವರ ಶ್ರಮದ ಫಲವಾಗಿ 6 ನೇ. ವರ್ಷ ಪೂರ್ಣ ಗೊಳ್ಳುವ ಜೊತೆಗೆ ಈ ಸಂಸ್ಥೆ 100 ನೇ. ವರ್ಷ ಆಚರಿಸುವ ಮಟ್ಟಿಗೆ ಈ ಸಂಸ್ಥೆ ಬೆಳೆಯಲಿ, ಇದನ್ನು ಹುಸೇನ್ ಭಾಷ ಕುಟುಂಬದವರು ಮುಂದುವರಿಸಿ ಕೊಂಡು ತೆರಳಬೇಕು ಎಂದರು.

ಉಪನ್ಯಾಸಕ ಆಂಜನೇಯ ನಾಯಕ ನಸ್ಲಾಪುರ ಮಾತನಾಡಿ, ಮಕ್ಕಳಿಗೆ ಶಿಕ್ಷಣ ಕೊಡುವಾಗ ಶಿಕ್ಷಕರು ತಿದ್ದಿ ತೀಡುವ ಕೆಲಸ ಮಾಡಬೇಕು. ಪೋಷಕರು ಸಹ ಮಕ್ಕಳು ಯಾವ ರೀತಿಯಲ್ಲಿ ಇದ್ದಾರೆ ಎಂದು ಪೋಷಕರು ಜವಾಬ್ದಾರಿ ಯುತವಾಗಿ ಗಮನ ಹರಿಸುವ ಕೆಲಸ ಮಾಡಬೇಕು ಎಂದರು.

ವಿಚಾರವಾದಿ ಮಹೆಬೂಬ್ ಮದ್ಲಾಪುರ ಮಾತನಾಡಿ, ಪೋಷಕರೆ ತಮ್ಮ ಮಕ್ಕಳಿಗೆ ಮೊಬೈಲ್ ಹಾಗು ಟಿವಿ ರಿಮೋಟ್ ಕೆಲಸ ಮಾಡಬೇಡಿ.ಯಾಕಂದರೆ ಶಿಕ್ಷಣ ಪಡೆ-ಯ ಬೇಕಾದ ಮಕ್ಕಳು ಅನ್ಯ ಮಾರ್ಗದಲ್ಲಿ ತೆರಳುವ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್.ಶರ್ಫುದ್ದೀನ್ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆ ಪ್ರಾರಂಭಿಸುವುದು ಸುಲಭದ ಮಾತಲ್ಲ. ಯಾಕಂದರೆ ನಾಲ್ಕು ಕುಟುಂಬದವರಿಗೆ ಕೆಲಸ ಕೊಡುವುದರ ಜೊತೆಗೆ ಎಲ್ಲವನ್ನು ನಿಭಾಯಿಸುವ ಕೆಲಸ ಖಾಸಗಿ ಶಿಕ್ಷಣ ಸಂಸ್ಥೆಯ ಮಾಲೀಕರಿಗೆ ಮಾತ್ರ ಗೊತ್ತು. ಶಿಕ್ಷಣ ಸಂಸ್ಥೆಯಲ್ಲಿ ಏನಾದರು ಅನಾಹುತವಾದರೆ ಶಿಕ್ಷಣ ಸಂಸ್ಥೆ ಮುಚ್ಚುವ ಕೆಲಸ ಮಾಡಿ ಎಂದು ಮಾನ ಹರಾಜು ಮಾಡುವುದು ಸಮಂಜಸವಲ್ಲ ಎಂದು ನೋವು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸೈನಿಕರಾದ ಜೆಲ್ಲಿ ಸಂಜೀವ ನಾಯಕ, ಕೆ.ಶರಣಬಸವ ನಾಯಕ, ಪುರಸಭೆ ಸದಸ್ಯ ಫರೀದ್ ಉಮ್ರಿ, ಕಾಂಗ್ರೆಸ್ ಮುಖಂಡ ವಿಜಯಕುಮಾರ್, ಶಂಕ್ರಪ್ಪ ಅಂಗಡಿ, ಆನಂದ,ಹಲೀಮ್ ಖಾನ್ ಸೇರಿದಂತೆ ಇನ್ನಿತರರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ. ನಕ್ಕುಂದಿ.ಮಾನ್ವಿ**

## ವಿಶ್ವ ಶ್ರವಣ ದಿನಾಚರಣೆ "ಕಿವಿ ಶ್ರವಣ ಬಗ್ಗೆ ನಿರ್ಲಕ್ಷ್ಯ ಬೇಡ ಜಾಗೃತಿ ಇರಲಿ"




**ಸಿಹಿ ಕಹಿ ಸುದ್ದಿ,**

ಜಗದಲ್ಲಿ ಜೀವ ಸಂಕುಲಗಳಲ್ಲಿ ಕಿವಿಯು ಬದುಕಿಗೆ ಪೂರಕ.ಮೆದುಳಿನ ಕಿಡಕಿಗಳು ವಿಶ್ವದ ಜ್ಞಾನದ ಬೆಳಕಿಗೆ ಮುಖ್ಯ.ಕಿವಿದೋಷ ಮನುಜನ ದಿನ ನಿತ್ಯ ಬಾಳಿನಲ್ಲಿ ದಾರಿ ತಪ್ಪುವವುದು ಮುಜುಗರ ಉಂಟು ಮಾಡುತ್ತದೆ. ಕಿವಿಗೆ ಕೇಳು ಹೇಳುವ ವಿಷಯ ಉತ್ತಮವಿರಲಿ ಹೇಳಿದ ಮಾತು ಕೇಳದಾಗ ಕಿವಿ ಹಿಂಡುವುದು ಲೋಕಾರೂಢಿ ಆರೋಗ್ಯಕರ ಕಿವಿ ಶ್ರವಣ ಶಕ್ತಿದಾಯಕ. ಶ್ರವಣ ದೋಷ ವಯೋಸಹಜ ಆಧುನಿಕ ವೈದ್ಯ ವಿಜ್ಞಾನದ ಸಹಾಯದಿ ಶ್ರವಣ ಸಾಧನ ಬಳಸಿ ಕಿವಿ ಕೇಳುವ ಸುಧಾರಣೆ ಮಕ್ಕಳಲ್ಲಿ ಶ್ರವಣದೋಷ ಬಲವಾದ ಪೆಟ್ಟಿನಿಂದ ಅನಾವಶ್ಯಕ ಕಡ್ಡಿ ಹಾಕುವುದರಿಂದ ದೋಷ ಉಂಟಾಗುವುದು. ಎಚ್ಚರಿಕೆ ವಹಿಸ ಬೇಕು ಮಕ್ಕಳ ಬಳೆವಣಿಗೆಗೆ ಕಿವಿಗಳ ಆರೋಗ್ಯ ಮುಖ್ಯ. ವಯೋಸಹಜ ಕಿವಿ ಶ್ರವಣ ದೋಷ ಸಾಮಾನ್ಯ, "ಜೀವನದಲ್ಲಿ ಕೇಳಿಸಿ ಕೊಳ್ಳಲು ಜಾಗೃತಿ ಇರಲಿ" ಶ್ರವಣ ಆರ?ಕೆ ಕಿವಿ ರಕ್ಷಣೆ ನಮ್ಮೆಲ್ಲರ ಹೊಣೆ ಕಿವಿಯ ಒಳಗಡೆ ಯಾವುದೇ ವಸ್ತು ಹಾಕ ಬೇಡಿ. ಮೊಬೈಲ್ ನಲ್ಲಿ ದೀರ್ಘ ಕಾಲ ಮಾತನಾಡ ಬೇಡಿ ಕಲುಷೀತ ನೀರು ವಾಯು ಜೋರಾದ ಶಬ್ಧಗಳಿಂದ ದೂರವಿರಿ. ಸೂಕ್ತ ಚಿಕಿತ್ಸಯಿಂದ ಶ್ರವಣ ದೋಷ ನಿವಾರಣೆ ಶಬ್ಧ ಮಾಲಿನ್ಯ ಮಕ್ಕಳು ಆಟದ ಸಮಯದಲ್ಲಿ ಮಣ್ಣು ಮರಳು ಸೇರುವ ಸಾಧ್ಯತೆ ಇರುತ್ತದೆ. ಕಲುಷಿತ ವಾಯು ಕಿವಿ ಸೇರಿದಾಗ ಶೀತ ನೆಗಡಿ ಆವರಿಸಿದಾಗ ಕಿವಿಗಳು ತೊಂದರೆ ಸಹಜ ನಿರ್ಲಕ್ಷ್ಯ ಬೇಡ. ವೈದ್ಯಕೀಯ ಪರೀಕ್ಷೆ ಚಿಕಿತ್ಸೆ ಅವಶ್ಯಕ ಶೀಘ್ರ ಪತ್ತೆ ಶೀಘ್ರ ಚಿಕಿತ್ಸೆ ಯಿಂದ ಕಿವಿಯ ಶ್ರವಣ ದೋಷ ನಿವಾರಿಸಬಹುದು. "ಬದಲಾಗುತ್ತಿರುವ ಮನಸ್ಥಿತಿ ಕಿವಿಯ ಶ್ರವಣ ಆರ?ಕೆ ಉತ್ತಮ ಗೊಳಿಸಲು ನಿಮ್ಮನ್ನು ಸಶಕ್ತ ಗೊಳಿಸಿ ಕೊಳ್ಳಿ "ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಮತ್ತು ನಿವಾರಣ ಕಾರ್ಯಕ್ರಮ ಸದುಪಯೋಗ ಪಡಿಸಿ ಕೊಳ್ಳಿ. ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಯಾವುದೇ ತರಹ ಕಿವಿ ಶ್ರವಣ ದೋಷವಿದ್ದಲ್ಲಿ ಕಿವಿ ಮೂಗು ಗಂಟಲು ತಜ್ಞರ ಸಲಹೆ ಚಿಕಿತ್ಸೆ ಉಚಿತ ವಾಗಿರುತ್ತದೆ. ಸಮಾಜ ಕುಟುಂಬದಲ್ಲಿ ಅನಾವಶ್ಯಕ ವಿಷಯಾಂತರ ದಿಂದ ಸಾಮಾಜಿಕ ಕೌಟುಂಬಿಕ ಸ್ವಾಸ್ಥ್ಯ ಕಲುಷಿತ ವಾಗಬಹುದು ಎಚ್ಚರಿ-ಕೆ ವಹಿಸುವುದು ಇಲ್ಲಿ ಕೇಳಿ ಅಲ್ಲಿ ಹೇಳಿದಿರುವುದು ಅವಶ್ಯಕ. ಉತ್ತಮ ವಿಷಯ ಹಂಚಿಕೆ ವೈಯಕ್ತಿಕ ಕುಟುಂಬ ಸಮಾಜ ಸುಧಾರಿಸುವುದು ಉತ್ತಮ ವ್ಯಕ್ತಿತ್ವದ ಮನುಜ ಧರ್ಮ ಎನಿಸುವುದು. ಬೇಡವಾದ ಮಾರಕ ಎನಿಸುವ ಕೇಳಿದರೂ ಕಿವಿ ಕೇಳದ ಹಾಗಿರುವುದು ಉತ್ತಮ ಕಾರ್ಯಗಳಲ್ಲಿ ಒಂದೆನಿಸುವುದು. ವಿಶ್ವ ಶ್ರವಣ ದಿನ ಆರೋಗ್ಯಕರ ಕಿವಿಗಳು ಮಾನವನ ಉತ್ತಮ ಜೀವನ ಶೈಲಿಗೆ ಪೂರಕವಾಗಲಿ ಸಮಾಜ ಕುಟುಂಬ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ದುಷ್ಪರಿಣಾಮ ವಾಗದಿರಲಿ. "ವಿಶ್ವ ಶ್ರವಣ ದಿನಾಚರಣೆ" ಶುಭ ದಿನದ ಆರೋಗ್ಯಕರ ಕಿವಿ ಶ್ರವಣ ತಮ್ಮ ಕುಟುಂಬ ಪರಿವಾರ ಸರ್ವರ ಕಿವಿ ಶ್ರವಣದೋಷ ಆಗದಿರಲಿ ಕಿವಿಗಳ ಶ್ರವಣ ಸುಂದರ ಬದುಕಿಗೆ ಜೋಪಾನ ವಾಗಿರಲಿ ಕಿವಿಗಳ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ ಕಾಳಜಿ ಇರಲಿ ಅನಿವಾರ್ಯ ಪರಿಸ್ಥಿತಿಗಳಲ್ಲಿ ಕಿವಿ ತುರಿಕೆ ಶೀಲೀಂದ್ರ ಬೆಳವಣಿಗೆ ಒಣಗಿದ ಕಿವಿ ಬ್ಯಾಕ್ಟೇರಿಯಾ ದೋಷ ಕಾಣಿಸಿದರೆ ಕಿವಿ ತಜ್ಞರು ಸಲಹೆ ಚಿಕಿತ್ಸೆ ಪಡೆಯಿರಿ.

**ಶ್ರೀದೇಶಂಸು**
**ಶ್ರೀಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿಗಳು**
**"ವಿಶ್ವ ಆರೋಗ್ಯ ಸಂಜೀವಿನಿ"**
**ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು**
**ಬಾಗಲಕೋಟ.**

## ಬಿಲ್ ಪಾವತಿಸುವಂತೆ ಸಕ್ಕರೆ ಕಾರ್ಖಾನೆಗೆ ರೈತರಿಂದ ಮುತ್ತಿಗೆ



**ಸಿಹಿ ಕಹಿ ಸುದ್ದಿ,**

**ನಾದ ಕೆ.ಡಿ :** ಇಂಡಿ ತಾಲೂಕಿನ ನಾದ ಕೆಡಿ ಜಮಖಂಡಿ ಸುಗರ್ ಲಿಮಿಟೆಡ್ ಘಟಕ 02 ಕಾರ್ಖಾನೆಗೆ ಇಂದು ಹಲವಾರು ರೈತರು ಸೇರಿಕೊಂಡು ಬೆಳೆದ ಕಬ್ಬು ಕಟಾವು ಮಾಡಿ ಕೊಂಡು ಕಾರ್ಖಾನೆಗೆ ನುರಿಸಿ ಹಲವು ದಿನಗಳು ಕಳೆದರೂ ಕಾರ್ಖಾನೆ ಮಾಲೀಕರು ಇನ್ನೂ ವರೆಗೆ ಇನ್ನೂಳಿದ ಹಣ ರೈತರಿಗೆ ಪಾವತಿಸಿ ರುವುದಿಲ್ಲ. ಅಷ್ಟೇ ಅಲ್ಲದೆ ರೈತರು ಸಾಲ ಸೂಲ ಮಾಡಿ ಹಗಲು ರಾತ್ರಿ ಎನ್ನದೆ ಬೆಳೆದ ಬೆಳೆಗೆ ಸರಿಯಾಗಿ ಹಣ ದೊರೆ-ಯದೆ ಕಂಗಾಲಾಗಿದ್ದು, ರೈತರ ಈ ಗೋಳು ಕೇಳದ ಕಾರ್ಖಾನೆ ಮಾಲೀಕರು ಆದಷ್ಟು ಬೇಗನೆ ರೈತರ ಖಾತೆಗೆ ಹಣ ಜಮಾ ಮಾಡಬೇಕೆಂದು ಇಂದು ನೂರಾರು ರೈತರು ಜಮಖಂಡಿ ಸುಗರ್ ಲಿಮಿಟೆಡ್ – 02 ನಾದ ಕೆಡಿ ಯುನಿಟಗೆ ಮುತ್ತಿಗೆ ಹಾಕಿದರು ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ.ಬಿ.ಹರಿಜನ.ಇಂಡಿ**

## ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರ ಕಲಿಸುವ ಕಾರ್ಯವಾಗಲಿ: ಶ್ರೀಕಾಂತ



**ತಾಳಿಕೋಟೆ:** ಇಂದಿನ ಮಕ್ಕಳಿಗೆ ಶಿಕ್ಷಕರು ಕೇವಲ ಹೆಚ್ಚಿನ ಅಂಕ ಗಳಿಕೆಗಾಗಿ ಶಿಕ್ಷಣ ನೀಡುವ ಕಡೆಗೆ ಹೆಚ್ಚಿಗೆ ವಲುವು ತೋರಿಸುತ್ತಾ ಸಾಗಿರುವದನ್ನು ನಾವು ಕಾಣುತ್ತಿದ್ದೇವೆ ಮೌಲ್ಯಾಧಾರಿತ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸುವ ಕಾರ್ಯ ಶಿಕ್ಷಕರು ಕೂಡಾ ಮಾಡಬೇಕೆಂದು ಮಡಿಕೇಶ್ವರ ಪ್ರೌಢ ಶಾಲೆಯ ಶ್ರೀಕಾಂತ ರಾಠೋಡ ಗುರುಜಿಯವರು ಹೇಳಿದರು.

ತಾಲೂಕಿನ ಹಿರೂರ ಗ್ರಾಮದ ಶ್ರೀಭೋಗೇಶ್ವರ ಪ್ರೌಢ ಶಾಲೆಯ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೆಳನ ಹಾಗೂ ಶುಭಕೋರುವ ಸಮಾರಂಭದದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ಇಂದಿನ ವಿದ್ಯಾರ್ಥಿಗಳು ಮೋಬೈಲ್ ಗೀಳಿನಿಂದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಪಾಲಕರು ಮಕ್ಕಳಿಗೆ ಮೋಬೈಲ್ ಹುಚ್ಚು ಬಿಡಿಸಿ ಉತ್ತಮ ಶಿಕ್ಷಣದ ಕಡೆಗೆ ಒತ್ತು ನೀಡಬೇಕು ಮನೆಯೇ ಮೊದಲು ಪಾಠ ಶಾಲೆ ಎಂಬಂತೆ ಶಿಕ್ಷಕರು ನೀಡಿದ ಪಾಠ ಭೋದನೆಯನ್ನು ಮನೆಯಲ್ಲಿ ಚರ್ಚಿಸುವದರೊಂದಿಗೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೇರೆಪಿಸಬೇಕು ಇದರಿಂದ ಮಕ್ಕಳ ಬಧುಕು ಸುಂದರವಾಗಲು ಸಾದ್ಯವಾಗಲಿದೆ ಎಂದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದ ಹಿರೂರ ಅನ್ನದಾನೇಶ್ವರ ಮಠದ ಶ್ರೀ ಷ.ಬ್ರ ಚನ್ನಮಲ್ಲಯ್ಯ ಹಿರೇಮಠ ಶ್ರೀಗಳು ಮಾತನಾಡಿ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ ಎಂಬುದು ಅಗತ್ಯವಾಗಿದೆ ಪ್ರಾಮಾಣಿಕತೆಯಿಂದಲೇ ಮುಂದಿನ ಏಳಿಗೆಯಾಗಲಿದೆ ಕಾರಣ ವಿದ್ಯಾರ್ಥಿಯಾದವನು ತಂದೆ ತಾಯಿಯನ್ನು ಗೌರವಿಸುವ ಕಾರ್ಯವಾಗಬೇಕು ಇದರಿಂದ ಆದರ್ಶ ವಿದ್ಯಾರ್ಥಿಯಾಗಲು ಸಾದ್ಯವಾಗಲಿದೆ ಅದರಂತೆ ತಂದೆ ತಾಯಂದಿರರೂ ಸಹ ದಾರ್ಶನಿಕರಾಗಬೇಕು ಅಂದರೆ ಮಕ್ಕಳು ಕೂಡಾ ಒಳ್ಳೆಯ ಸ್ಥಾನಮಾನ ಕಲ್ಪಿಸಿಕೊಳ್ಳುವದರ ಜೊತೆಗೆ ಸಮಾಜ ಕೊಂಡಾಡುವ ವ್ಯಕ್ತಿಯಾಗಿ ಬೆಳೆಯಲು ಸಾದ್ಯವಾಗಲಿದೆ ಎಂದರು.

ಇನ್ನೋರ್ವ ಶ್ರೀ ರಾಮಲಿಂಗೇಶ್ವರ ಪ್ರೌಢ ಶಾಲೆಯ ನಿವೃತ್ತ ಮುಖ್ಯಾಧ್ಯಾಪಕರಾದ ಬಿ.ಎಸ್ ದ್ಯಾಪೂರ ಅವರು ತಮ್ಮ ವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಂಡರು.

ಇದೇ ಸಮಯದಲ್ಲಿ ಮುವತ್ತು ವರ್ಷಗಳವರಗೆ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮುಖ್ಯಾಧ್ಯಾಪಕರುಗಳಾದ ಬಿ.ಎಸ್ ವಡಗೇರಿ, ಎಸ್.ಜಿ ಗುಣಕಿ, ಹಾಗೂ ಸರಕಾರಿ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕರಾದ ಎಚ್.ಡಿ ಸಿಂದಗಿರಿ, ಮತ್ತು ನಮ್ಮ ಶಾಲೆಯಲ್ಲಿ ಕಲಿತು ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ನೇಮಕಗೊಂಡ ಶ್ರೀಮತಿ ಜಿ.ಎಸ್ ಮದ್ದರಕಿ ಅವರನ್ನು ಸನ್ಮಾನಿಸಲಾಯಿತು.

2023–24ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಪಡೆದ ವಿದ್ಯಾರ್ಥಿನಿ ಶಿವಲೀಲಾ ಸಜ್ಜನ, ದ್ವಿತೀಯ ಸ್ಥಾನ ಪಡೆದ ಅಪೇಕ್ಷಾ ವಂದಲಿ, ಹಾಗೂ ತೃತೀಯ ಸ್ಥಾನ ಪಡೆದ ಗುರುಬಾಯಿ ಚೌದ್ರಿ ಇವರಿಗೆ ಪ್ರತಿಬಾ ಪುರಸ್ಕಾರ ನೀಡಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಶ್ರೀ ಭೋಗೇಶ್ವರ ಪ್ರೌಢ ಶಾಲೆಯ ಮುಖ್ಯಾಧ್ಯಾಪಕರಾದ ಬಿ.ಎಚ್ ಏವೂರ ಗುರುಗಳು ವಹಿಸಿದ್ದರು.

ವೇದಿಕೆಯ ಮೇಲೆ ಹಿರಿಯ ಶಿಕ್ಷಕರಾದ ಎಸ್.ವ್ಹಿ ದ್ವಾರನಹಳ್ಳಿ,ಶ್ರೀಮತಿಡಿ.ಎಂತೇಲಕರ,ಕುಮಾರಿ ಪೂಜಾಹಿರೇಮಠ,ಎಚ್.ಬಿಬಿರಾದಾರ,ಎಂ.ಬಿ ದೇಸಾಯಿ ಮೊದಲಾದವರು ಉಪಸ್ಥಿತರಿದ್ದರು. ಶಿಕ್ಷಕಿಶ್ರೀಮತಿಎಸ್.ಎನ್ಬಿರಾದಾರಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಶಿಕ್ಷಕ ಡಿ.ಡಿ ಲಮಾಣಿ ನಿರೂಪಿಸಿದರು. ದೈಹಿಕ ಶಿಕ್ಷಕರಾದ ಎಸ್.ಆರ್ ಅಂಬ್ಲಾಯಳ ವಂದಿಸಿದರು.

## ಸಮುದಾಯಿಕ ಉಪಯುಕ್ತ ಫಲಿತಾಂಶ ಪೂರಿತ ಸಂಶೋಧನೆಗಳು ಹೊರಬರಲಿ: ಪ್ರೊ. ಎಂ.ಎಸ್. ಖೊದ್ನಾಪೂರ



**ವಿಜಯಪುರ :** ಯಾವುದೇ ವಿಷಯ, ಸಂಗತಿ, ಸಮಸ್ಯೆಗೆ ಪರಿಹಾರ ಮತ್ತು ಹೊಸ ಜ್ಞಾನವನ್ನು ಪಡೆಯಲು ಅಥವಾ ಅಸ್ತಿತ್ವದಲ್ಲಿರುವ ಜ್ಞಾನವನ್ನು ಸುಧಾರಿಸಲು ಮಾಹಿತಿಯನ್ನು ಸಂಗ್ರಹಿಸಿ, ತನ್ಮೂಲಕ ಕೈಕೊಳ್ಳುವ ತನಿಖೆ ಅಥವಾ ವಿಶ್ಲೇಷಣಾತ್ಮಕ ಮೌಲ್ಯಮಾಪನವೇ ಸಂಶೋಧನೆಯಾಗಿದೆ. ಇದು ಯಾವುದೇ ಕ್ಷೇತ್ರದಲ್ಲಿ ಹೊಸತನವನ್ನು ಕಾಣುವ, ನಾವಿನ್ಯತೆಯನ್ನು ಹೊಂದುವ ಮತ್ತು ಸಿದ್ಧಾಂತಗಳ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಂ.ಎಸ್.ಖೊದ್ನಾಪೂರ ಅಭಿಪ್ರಾಯಪಟ್ಟರು. ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜಿನಲ್ಲಿ ಎಂ.ಕಾಂ ವಿಭಾಗದ ವತಿಯಿಂದ ಆಯೋಜಿಸಿದ್ದ "ಸಂಶೋಧನಾ ಕಾರ್ಯ ವಿಧಾನಗಳು" ವಿಷಯ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ ನೀಡಿ, ಮಾತನಾಡುತ್ತಿದ್ದರು.

ವೈಜ್ಞಾನಿಕ ಆಧಾರಿತ ಸಂಶೋಧನೆಗಳಿಂದ ಕೃಷಿ, ಕೈಗಾರಿಕಾ ಕ್ಷೇತ್ರಗಳಲ್ಲಿ ಸಂಶೋಧನೆಗಳು ನಡೆದು ಅದು ದೇಶದ ಆರ್ಥಿಕ ಪ್ರಗತಿ ಮತ್ತು ಸುಸ್ಥಿರ ಅಭಿವೃದ್ಧಿ ಸಾಧಿಸುವಲ್ಲಿ ಪೂರಕವಾಗಬೇಕು ಎಂದು ಅವರು ತಿಳಿಸಿದರು.

ಎರಡನೇ ಗೋಷ್ಠಿಯಲ್ಲಿ "ಪ್ರಾಜೆಕ್ಟ ವರದಿ ತಯಾರಿಕೆ" ವಿಷಯ ಕುರಿತು ಉಪನ್ಯಾಸ ನೀಡಿದ ಡಾ. ಸಂತೋಷ ಕಬಾಡೆ ಅವರು ಸ್ನಾತಕ–ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಪದವಿ ವಿದ್ಯಾರ್ಥಿಗಳು ಪ್ರಾಜೆಕ್ಟ ವರದಿ ತಯಾರಿಸುವಾಗ ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದಂತೆ ಉದ್ದೇಶ ಮತ್ತು ಗುರಿಗಳನ್ನು ನಿಗದಿಪಡಿಸಿ, ಸಂಶೋಧನೆಯಲ್ಲಿ ಏನೆಲ್ಲ ಅಂಶಗಳನ್ನು ಪರಿಗಣಿಸಬೇಕು, ಸಂಖ್ಯಾಶಾಸ್ತ್ರದ ಪದ್ಧತಿಗಳ ಅಳವಡಿಕೆ, ಮಾಹಿತಿ ಸಂಗ್ರಹಿಸಲು ನಡೆಸಬಹುದಾದ ಸಮೀಕ್ಷೆ, ದತ್ತಾಂಶ ವಿಶ್ಲೇಷಣೆ, ಮತ್ತು ಅದರ ಮಹತ್ವದ ಕುರಿತು ಉಪನ್ಯಾಸ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ವೈ. ತಮ್ಮಣ್ಣ ಅವರು ಮಾತನಾಡಿ, ಸಂಶೋಧನಾರ್ಥಿಗಳು ಭವಿಷ್ಯದ ಸಂಶೋಧನೆ ಮತ್ತು ಅಭಿವೃದ್ಧಿಗೆ ಮಾರ್ಗದರ್ಶನ ನೀಡಲು ಹೊಸ ವಿಚಾರಗಳು, ಮತ್ತು ಸಿದ್ಧಾಂತಗಳನ್ನು ಸುಧಾರಿಸಲು ಪ್ರಯೋಜನಕಾರಿಯಾಗಬೇಕು. ಸಂಶೋಧನೆಯು ಕೇವಲ ಪದವಿ ಪಡೆಯಲು ಅಥವಾ ವೃತ್ತಿ ಪದೋನ್ನತಿ ಪಡೆಯಲು ಮಾತ್ರ ಸೀಮಿತವಾಗಬಾರದು, ಸಮಾಜಕ್ಕೆ ಮತ್ತು ಸರ್ಕಾರ ಯೋಜನೆಗಳ ಯಶಸ್ವಿ ಕಾರ್ಯಾಚರಣೆಗೆ ಪೂರಕವಾಗುವ ಫಲಿತಾಂಶ ಪೂರಿತ ಸಂಶೋಧನೆಗಳನ್ನು ಕೈಕೊಳ್ಳಬೇಕೆಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಎಂ.ಕಾಂ ವಿಭಾಗದ ಪ್ರಾಧ್ಯಾಪಕಿ ಸೌಮ್ಯ ಕುಲಕರ್ಣಿ, ನಿವೇದಿತಾ. ಡಿ.ಕೆ. ವೇದಿಕೆಯ ಮೇಲಿದ್ದರು.

ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ ಸಂಚಾಲಕಿ ಡಾ. ಭಕ್ತಿ ಮಹಿಂದ್ರಕರ, ಡಾ. ಎಂ. ಶ್ರೀನಿವಾಸ, ಪ್ರೊ. ಕೆ.ಎಂ.ಪಾಟೀಲ, ಪ್ರೊ. ಶೈಲಾ ರೆಬಗೊಂಡ, ಎಸ್.ಎಂ. ತುಪ್ಪದ, ಇತರರು ಉಪಸ್ಥಿತರಿದರು. ಲಕ್ಷ್ಮೀ ಮಸಳಿ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಸೌಮ್ಯ ಕುಲಕರ್ಣಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಎಲ್ಲ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ನಾಟಕಗಳು ಸಮಾಜದ ಪ್ರತಿಬಿಂಬ: ಡಾ. ಪ್ರಭುಗೌಡ



**ತಾಳಿಕೋಟೆ :** ನಾಟಕಗಳು ಸಮಾಜದಲ್ಲಿನ ವಿದ್ಯಮಾನಗಳನ್ನು ಪ್ರತಿಬಿಂಬಿಸುತ್ತವೆ. ಅಲ್ಲದೇ ಜೀವನದ ಸುಗಮ ಹಾದಿಯನ್ನು ಕಲ್ಪಿಸಿ ಆದರ್ಶಮಯ ಜೀವನ ನಡೆಸಲು ದಾರಿದೀಪವಾಗಿವೆ ಎಂದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞ ವೈದ್ಯರಾದ ಡಾ.ಪ್ರಭುಗೌಡ ಲಿಂಗದಳ್ಳಿ ಅವರು ಹೇಳಿದರು.

ಶುಕ್ರವಾರರಂದು ತಾಲೂಕಿನ ಬಿಳೇಭಾವಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ ಹಾಗೂ ಶ್ರೀ ಭಾಗಮ್ಮದೇವಿ ಜಾತ್ರಾಮಹೋತ್ಸವ ಅಂಗವಾಗಿ ಏರ್ಪಡಿಸಲಾದ ಮಾತು ಬಿದ್ದಿತು ಮೌ ಗೆದ್ದಿತು ಎಂಬ ಸುಂದ ಸಾಮಾಜಿಕ ನಾಟಕವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ನಾಟಕ ಕೇವಲ ಕಲೆ ಅಷ್ಟೇ ಅಲ್ಲಾ ಜೀವನದ ಗಟ್ಟಿತನದ ದಾರಿ ತೋರಿಸುವಂತಹದ್ದಾಗಿದೆ ಅವುಗಳಿಂದ ಜೀವನದಲ್ಲಿ ಕಲಿಯುವುದು ಬಹಳಷ್ಟಿದೆ ಇಂದಿನ ವೈಭವೀಕರಿತ ಸೀನಾಮಗಳಿಂದ ನಾಟಕ ಕಲೆ ಎಂಬುದು ನಶೀಸಿ ಹೋಗುತ್ತಿರುವದು ಅಘಾತಕರ ಸಂಗತಿಯಾಗಿದೆ ನಾನು ಬಾಲ್ಯದಿಂದಲೇ ನಾಟಕದ ಬಗ್ಗೆ ಹುಚ್ಚು ಪ್ರೀತಿಯನ್ನು ಹೊಂದಿದ್ದೆ ಭಕ್ತ ಪ್ರಲ್ಹಾದ ಮತ್ತು ಬಬ್ರುವಾಹನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸುತ್ತಾ ಬಂದಿದ್ದೇನೆಂದು ಭಕ್ತ ಪ್ರಲ್ಹಾದ ಮತ್ತು ಬಬ್ರುವಾಹನ ನಾಟಕದ ಕೆಲವು ತುಣುಕುಗಳನ್ನು ಹಂಚಿಕೊಂಡ ಅವರು ರಂಗಭೂಮಿ ಎಂಬುದು ಈ ದೇಶದ ಪ್ರಾಚೀನ ಕಲೆಯಾಗಿದೆ ನಾಟಕಗಳು ಕೇವಲ ಮನರಂಜನೆಯಲ್ಲ. ಅವುಗಳು ಪ್ರಸ್ತುತ ಸಮಾಜದ ಅಭಿವ್ಯಕ್ತಿಯಾಗಿ ಕೆಲಸ ಮಾಡುತ್ತವೆ ಎಂದ ಡಾ.ಪ್ರಭುಗೌಡ ಅವರು ನಾಟಕಗಳು ಪ್ರೇಕ್ಷ ಕರನ್ನು ಹಿಡಿದಿಡಬೇಕು. ಅದಕ್ಕೆ ಗಟ್ಟಿ ಕಥೆ, ಅತ್ಯುತ್ತಮ ಅಭಿನಯ, ರಂಗಸಜ್ಜಿಕೆ ಉತ್ತಮವಾಗಿದ್ದು ಕೆಲವೊಮ್ಮೆ ಪ್ರೇಕ್ಷ ಕನನ್ನು ಹಿಡಿದಿಡುವಲ್ಲಿ ಸೋಲುತ್ತವೆ. ಅಂತದ್ದರಲ್ಲಿ ಏಕವ್ಯಕ್ತಿ ನಾಟಕ ಪ್ರದರ್ಶನಕ್ಕೆ ಬಹಳ ಧೈರ್ಯಬೇಕು. ಒಬ್ಬನೇ ಕಲಾವಿದ ಎಲ್ಲ ಪ್ರೇಕ್ಷಕರನ್ನು ತಲುಪುವುದು ಸುಲಭದ ಮಾತಲ್ಲ ಅಂತಹ ಪ್ರಾಚೀನ ನಾಟಕ ಕಲೆಯನ್ನು ಉಳಿಸಿ ಬೆಳೆಸುವದರ ಜೊತೆಗೆ ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹಿಸುವಂತಹ ಕಾರ್ಯ ಬಿಳೇಭಾವಿ ಗ್ರಾಮಸ್ಥರರು ಜಾತ್ರೋತ್ಸವ ಅಂಗವಾಗಿ ಮಾಡಿರುವದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಇದೇ ಸಮಯದಲ್ಲಿ ನಾಟಕ ಕಲೆ ಪ್ರದರ್ಶಿಸಲು ಆಗಮಿಸಿದ ರಂಗಭೂಮಿ ಕಲಾವಿದರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಮಯದಲ್ಲಿ ಬಿಳೇಭಾವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮುಖಂಡರುಗಳು ಉಪಸ್ಥಿತರಿದ್ದರು.

# ಹಿಂದು ಸಂಸ್ಕೃತಿಗೆ ವಿಪ್ರರ ಕೊಡುಗೆ ಅನನ್ಯ: ಯತ್ನಾಳ



**ವಿಜಯಪುರ :** ಹಿಂದು ಸಂಸ್ಕೃತಿಗೆ ವಿಪ್ರರ ಕೊಡುಗೆ ಅನನ್ಯವಾಗಿದೆ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂದಿಂದ ತೊರವಿ ನರಸಿಂಹ ದೇವಸ್ಥಾನದಲ್ಲಿ ಎರಡು ದಿನ ಹಮ್ಮಿಕೊಂಡಿದ್ದ ಗಾಯತ್ರಿ ಜಪ ಯಜ್ಞಹಾಗೂ ಮಹಾ ರುದ್ರಹೋಮ ಸಮಾರೋಪದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದಲ್ಲಿ ಹಿಂದು ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ವಿಪ್ರ ಸಮಾಜದಕೊಡುಗೆಮರೆಯುವಂತಿಲ್ಲ.ವಿಪ್ರಸಮಾಜ ಸದಾ ವಿಶ್ವದ ಒಳಿತನ್ನು ಬಯಸುತ್ತದೆ. ಸರ್ವೇಜನ ಸುಖಿನೋಭವಂತು ಎಂಬ ತತ್ವದಡಿಯಲ್ಲಿ ಪ್ರಪಂಚದ ಎಲ್ಲ ಜನರಿಗೂ ಸ?ಖ, ಶಾಂತಿ ಲಭಿಸಲಿ ಎಂದು ಬಯಸುವ ಸಮಾಜ ಇದಾಗಿದೆ. ಹೋಮ, ಹವನ ಮಾಡುವುದರಿಂದ ಉತ್ತಮ ಮಳೆಯಾಗುತ್ತದೆ. ಮಳೆಯಾದರೆ ಬೆಳೆ ಬೆಳೆಯಲು ಸಾಧ್ಯ. ಲೋಕ ಕಲ್ಯಾಣಾರ್ಥ ಇಂಥ ಯಜ್ಞ ಮಾಡುತ್ತಿರುವ ಬ್ರಾಹ್ಮಣ ಸಮಾಜದ ಕಾರ್ಯ ಶ್ಲಾನೀಯ ಎಂದರು.

ಭಾನುವಾರ ಬೆಳಗ್ಗೆ ಗಾಯತ್ರಿ ಜಪ ಯಜ್ಞ ಹಾಗೂ ಮಹಾರುದ್ರ ಹೋಮದ ಪೂರ್ಣಾಹುತಿ ನಡೆಯಿತು. ನಂತರ ಶ್ರೀ ಲಕ್ಷ್ಮಿ ನರಸಿಂಹ ದೇವರ ರಥೋತ್ಸವ ವೈಭವದಿಂದ ಜರುಗಿತು. ದಾನಿಗಳಿಗೆ ಸನ್ಮಾನ ಸಮಾರಂಭ ಹಾಗೂ ಭಕ್ತರಿಗೆ ಸಾಮೂಹಿಕ ತೀರ್ಥ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಪಂ. ಮಧ್ವಾಚಾರ್ಯ ಮೊಕಾಶಿ, ಪಂ.ವೇದನಿಧಿ ಆಚಾರ್ಯ, ಶ್ರೀಕಾಂತಾಚಾರ್ಯ ಆಶ್ರಿತ, ಕೃಷ್ಣಾಚಾರ್ಯ ಗಲಗಲಿ, ಸುಧನ್ವಸಂಗಮ, ಕರ್ನಾಟಕ ರಾಜ್ಯ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆನಂದ ಜೋಶಿ, ತೊರವಿ ನರಸಿಂಹ ದೇವಸ್ಥಾನ ಸಮಿತಿ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ಉಪಾಧ್ಯಕ್ಷ ಶಶಿಕಾಂತ ಜೋಶಿ, ಕಾರ್ಯದರ್ಶಿ ಸಂತೋಷ ಕುಲಕರ್ಣಿ ಹಾಗೂ ವಿಪ್ರ ಸಮಾಜದ ಪ್ರಮುಖರಾದ ಉಲ್ಲಾಸ ಪಾಟೀಲ, ಎಸ್.ಎಂ.ದೇಸಾಯಿ, ವಿದ್ಯಾ ಕುಲಕರ್ಣಿ, ಚೈತ್ರಾ ಗೊರಟೆಕರ, ಆನಂದ ಕುಲಕರ್ಣಿ, ಪ್ರದೀಪ ಕುಲಕರ್ಣಿ, ರಮೇಶ ನಾಮಣ್ಣವರ, ಪವನ ಗಲಗಲಿ, ಸಂದೀಪ ಕುಲಕರ್ಣಿ, ಕೆ.ಬಿ. ಕುಲಕರ್ಣಿ, ರಾಜೇಂದ್ರ ಜೋಶಿ, ಸುಧೀಂದ್ರ ಜೋಶಿ, ಗೋವಿಂದ ದೇಶಪಾಂಡೆ, ಪ್ರಹ್ಲಾದ ಕುಲಕರ್ಣಿ, ವಿಜಯ ಜೋಶಿ, ಅನಂತ ಕುಲಕರ್ಣಿ, ಅಂಬಾದಾಸ ಜೋಶಿ ಹಾಗೂ ಭಕ್ತರು ಪಾಲ್ಗೊಂಡಿದ್ದರು.

# ಶರಣರ ಚಿಂತನೆಗಳು ಸಮಾಜ ಪರಿವರ್ತನೆಗೆ ಸನ್ಮಾರ್ಗವಿದ್ದಂತೆ: ಡಾ. ವಿಷ್ಣು ಶಿಂಧೆ

**ವಿಜಯಪುರ :** ಶರಣರ ಚಿಂತನೆಗಳ ಮೂಲಕ ಶರಣ ಸಾಹಿತ್ಯದ ಆಚಾರ ವಿಚಾರಗಳನ್ನು ನಾವೆಲ್ಲ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವುಗಳನ್ನು ಪಾಲಿಸಿದಾಗ ಮಾತ್ರ ಶರಣರ ಚಿಂತನೆಗಳಿಗೆ ಅರ್ಥ ಬರಲು ಸಾಧ್ಯ ಎಂದು ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿ.ವಿ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ. ವಿಷ್ಣು ಶಿಂಧೆ ಅಭಿಪ್ರಾಯಪಟ್ಟರು.

ನಗರದಕಂದಗಲ್‌ಶ್ರೀಹನುಮಂತರಾಯರಂಗಮಂದಿರದಲ್ಲಿ ಸೋಮವಾರ ಜರುಗಿದ 20ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಶರಣ ಸಾಹಿತ್ಯದ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶರಣರು ತಮ್ಮ ಬದುಕನ್ನು ಸಮಾಜದ ಒಳಿತಿಗಾಗಿ ಮೀಸಲಾಗಿಟ್ಟಿದ್ದರು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಮಾತನಾಡಿ, ಸುಂದರವಾದ



ರೂಪವನ್ನು ನೋಡದೇ ನಿರ್ಮಲವಾದ ಹೃದಯವಂತಿಕೆ ಇರಬೇಕೆಂದು ಪ್ರತಿಪಾದಿಸಿ ಹೋದ ಬಸವಾದಿ ಪ್ರಮಥರ ವಿಚಾರಗಳನ್ನು ನೆರೆದಿದ್ದ ಕನ್ನಡಾಭಿಮಾನಿಗಳಿಗೆ ಮನಮುಟ್ಟುವಂತೆ ತಿಳಿಸಿಕೊಟ್ಟರು.

ವಚನಗಳಲ್ಲಿ ಸಾಮಾಜಿಕ ಸಾಮರಸ್ಯ ಎಂಬ ವಿಷಯದ ಕುರಿತು ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಮಹಮ್ಮದ್ ಗೌಸ್ ಹವಾಲ್ದಾರ್ ಉಪನ್ಯಾಸ ನೀಡಿದರು.

ಮಹಿಳಾ ಸಂವೇದನೆ ? ವಚನಗಳು ಎಂಬ ವಿಷಯದ ಕುರಿತು ಸಾಹಿತಿಗಳಾದ ಶೋಭಾ ಮೇಡೆಗಾರ ಉಪನ್ಯಾಸ ನೀಡಿದರು. ವಿಜಯಪುರ ಜಿಲ್ಲೆಯ ಶರಣ ಶರಣೆಯರು ಎಂಬ ವಿಷಯದ ಕುರಿತು ತಿಕೋಟಾ ಕಸಾಪ ಗೌರವ ಕಾರ್ಯದರ್ಶಿ ಶಿಲ್ಪಾ ಹಂಜಿ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಬಸವನ ಬಾಗೇವಾಡಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿ.ಬಿ ಮರ್ತೂರ, ಜಗದೀಶ ಬೋಳಸೂರ, ಅಶೋಕ ಆಸಂಗಿ, ಸಂಗಮೇಶ ಕೆಂಭಾವಿ ಉಪಸ್ಥಿತರಿದ್ದು ಮಾತನಾಡಿದರು. ನಿರೂಪಣೆಯನ್ನು ಸಂತೋಷ ಅಮರಗೊಂಡ ನೆರವೇರಿಸಿದರು. ಸಾವಿತ್ರಿ ಬಾಗಲಕೋಟ ಸ್ವಾಗತಿಸಿದರು. ನೀಲಾ ಆಲೂರ ಹಾಗೂ ಅಮೋಘಸಿದ್ಧ ಪೂಜಾರಿ ನಿರ್ವಹಿಸಿದರು. ಮಮತಾ ಪಟ್ಟಣಶೆಟ್ಟಿ ವಂದಿಸಿದರು.

# ಗುಂಡಕನಾಳ ಮಠವು ಶಕ್ತಿಪೀಠ ಮಠ: ಜಾಲಹಳ್ಳಿಶ್ರೀ

**ತಾಳಿಕೋಟೆ :** ಗುಂಡಕನಾಳ ಗ್ರಾಮದ ಬೃಹನ್ ಮಠವು ಪ್ರಾಚೀನ ಪರಂಪರೆಯನ್ನು ಹೊಂದಿದ ಶಕ್ತಿಪೀಠ ಮಠವಾಗಿದೆ ಈ ಹಿಂದಿನ ಲಿಂಗೈಕ್ಯಶ್ರೀಗಳು ಮಾಡಿದ ಪವಾಡ ಸದೃಶ್ಯಗಳನ್ನು ಬಾನೆತ್ತರಕ್ಕೆ ಪರಿಚಯಿಸುವದರೊಂದಿಗೆ ಭಕ್ತರನ್ನು ಸನ್ಮಾರ್ಗದೆಡೆ ಕೊಂಡೊಯುವ ಕಾರ್ಯ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾಡುತ್ತಾ ಸಾಗಿದ್ದಾರೆಂದು ಜಾಲಹಳ್ಳಿಯ ಶಿವಾಚಾರ್ಯರತ್ನ ಶ್ರೀ ಷ.ಬ್ರ.ವಿದ್ಯಮಾನ್ಯ ಶಿವಾಭಿನವ ಜಯಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಶುಕ್ರವಾರರಂದು ತಾಲೂಕಿನ ಸುಕ್ಷೇತ್ರ ಗುಂಡಕನಾಳ ಗ್ರಾಮದ ಕಾಳೇಬೆಳಗುಂದಿ ಕಟ್ಟಿಮನಿ ಕರಡಕಲ್ ಬಿಲ್ಲಮ್ಮ ರಾಜನ ಗುರುಗಳ ವಂಶಸ್ಥರಾದ ಸ್ಥಿರಚರ ಪಟ್ಟಾಧ್ಯಕ್ಷರು ಮೂಲಸ್ಥಾನ ಬಿಲ್ಲಮಾದ್ರಿ ಗುರುಗಳ ಸಂಸ್ಥಾನ ಬ್ರಹನ್ಮಠದಲ್ಲಿ ಲಿಂಗೈಕ್ಯ ಗುರುಗಳ ಪುಣ್ಯಸ್ಮರಣೋತ್ಸವ ಹಾಗೂ ಶ್ರೀ ಷ ಬ್ರ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಮತ್ತು ಗುರುವಂದನ ಸಮಾರಂಭ ಹಾಗೂ ಜೀವನ ದರ್ಶನ ಪ್ರವಚನ ಮಂಗಲೋತ್ಸವ ಅಂಗವಾಗಿ ಏರ್ಪಡಿಸಲಾದ ಧರ್ಮಸಭೆಯಲ್ಲಿ ದಿವ್ಯ ಸಾನಿದ್ಯವಹಿಸಿ ಆಶೀರ್ವಚನ ನೀಡಿದ ಶ್ರೀಗಳು ಗುಂಡಕನಾಳ ಬೃಹನ್ಮಠವು ಸಮಾಜದ ಏಳಿಗೆಗಾಗಿ ಧರ್ಮದ ಉದ್ಧಾರಕ್ಕಾಗಿ ಧರ್ಮದ ಸೇವೆಯನ್ನು ಗೈಯಲು ಎರಡು ಪುತ್ರರತ್ನರನ್ನು ನೀಡಿದೆ ಇಬ್ಬರು ಪುತ್ರರು ಎರಡು ಮಠಗಳನ್ನು ಜೋಡಿತ್ತಿನ ಹಾಗೆ ಮಾಡಿಕೊಂಡು ಹೋಗುತ್ತಿರುವುದು ಈ ಮಠದ ಕೀರ್ತಿ ಬಾನೆತ್ತರಕ್ಕೆ ಇದೆ ಜನರು ಜೀವನವನ್ನು ಮನಸ್ಸಿಚ್ಚೆಯಂತೆ



ಕಳೆಯೋದಲ್ಲಾ ಸಂಸ್ಕಾರವಂತರಾಗಿ ಧರ್ಮವಂತರಾಗಿಪರೋಪಕಾರದಜೀವನ ಕಳೆಯಬೇಕು ಅಂದಾಗಿ ಜೀವನಕ್ಕೊಂದು ಬೆಲೆ ಬರಲಿದೆ ಅಲ್ಲದೇ ಉಸಿರು ನಿಂತರು ಹೆಸರು ಅಜರಾಮರವಾಗಿ ಉಳಿಯಲಿದೆ ಎಂದರು.

ಇನ್ನೋರ್ವ ಆಲಮೇಲ ಶ್ರೀ ಗುರುಸಂಸ್ಥಾನ ಹಿರೇಮಠದಶ್ರೀಚಂದ್ರಶೇಖರಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಸಮಾಜ ನಮಗೇನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜಕ್ಕೆ ನಮ್ಮ ಕೊಡುಗೆ ಏನು ಎಂಬುದು ಯೋಚಿಸಬೇಕು ಯಾಕೆಂದರೆ ಸಮಾಜದ ಆಸ್ತಿಯಾಗಿರುವ ಗುಂಡಕನಾಳ ಬೃಹನ್ಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ಸದಾ ಧರ್ಮದ ಕಾರ್ಯಗಳಿಗಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದಾರೆ ಇಂತಹ ಧರ್ಮದ ಪರಂಪರೆಯ ಮಠದ ಬೆನ್ನೆಲುಬಾಗಿ ಭಕ್ತವೃಂದದವರು ನಿಲ್ಲಬೇಕು ಇದರಿಂದ ಸಮಾಜದಲ್ಲಿ ಬದಲಾವಣೆ ತರಲು ಸಾದ್ಯವಾಗಲಿದೆ ಎಂದ ಅವರು ನಿತ್ಯ ನೀವನದಲ್ಲಿ ಪರೋಪಕಾರದ ದಾನಧರ್ಮದ ಕಾರ್ಯಗಳನ್ನು ಮಾಡಿ ಸಮಾಜದಲ್ಲಿ ಆದರ್ಶಪ್ರೀಯ ಜೀವನ ನಡೆಸಬೇಕೆಂದು ಹೇಳಿದರು.

ಇನ್ನೋರ್ವ ಬ.ಬಾಗೇವಾಡಿಯ ಪಟ್ಟದ ಪದ್ಮರಾಜ ಒಡೆಯರ ಹಿರೇಮಠದ ಶ್ರೀ ಒಡೆಯರ ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಮನುಷ್ಯನ ಜೀವನ ಶಾಶ್ವತವಲ್ಲ ಮನುಷ್ಯ ತನ್ನ ಜೀವನದಲ್ಲಿ ನಡೆದ ಹಾದಿಯಲ್ಲಿ ದಾನ ಧರ್ಮ ಪರೋಪಕಾರದಿಂದ ಮಾಡಿರುವಂತಹ ಪುಣ್ಯದ ಕಾರ್ಯವು ಮತ್ತು ಸಂಪಾದಿಸಿ ಜನಮಾನಸ ಶಾಸ್ವತವಾಗಿ ಉಳಿದುಕೊಳ್ಳಲಿದೆ ಈಭಾಗದ ಚಿಕ್ಕಮಠವಾಗಿರುವ ಗುಂಡಕನಾಳ ಗ್ರಾಮದ ಹೆಸರನ್ನು ಬಾನೆತ್ತರಕ್ಕೆ ಬೆಳೆಸಿದ ಕೀರ್ತಿ ಈ ಗ್ರಾಮದ ಶ್ರೀ ಗುರುಲಿಂಗ ಶಿವಾಚಾರ್ಯರಿಗೆ ಸಲ್ಲುತ್ತದೆ ಸದಾ ಧರ್ಮದ ಕಾರ್ಯದ ಜೊತೆಗೆ ಸನಾತನ ಧರ್ಮ ಉಳಿವಿಗಾಗಿ ಮತ್ತು ಮಾಡುತ್ತಿರುವ ಕಾರ್ಯ ಮೆಚ್ಚುವಂತಹದ್ದಾಗಿದೆ ಧರ್ಮದ ಕಾರ್ಯದಲ್ಲಿ ಸಾದ್ಯವಾಗದನ್ನು ಸಾಧಿಸಿ ತೋರಿಸುವದರೊಂದಿಗೆ ಭಕ್ತರನ್ನು ಒಳ್ಳೆಯ ದಾರಿಯತ್ತ ಕೊಂಡೊಯುವ ಕಾರ್ಯ ಶ್ರೀಮಠವು ಮಾಡುತ್ತಿದೆ ಇದಕ್ಕೆ ಗುಂಡಕನಾಳ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಶ್ರೀಮಠದ ಮೇಲಿಟ್ಟ ಪ್ರೀತಿಯೇ ಸಾಕ್ಷಿಯಾಗಿದೆ ಪುರಾತನ ಮಠವಾಗಿರುವ ಗುಂಡಕನಾಳ ಬೃಹನ್ಮಠವನ್ನು ಜೀರ್ಣೋದ್ದಾರ ಮಾಡುವ ಸಂಕಲ್ಪವನ್ನು ಈ ಭಾಗದ ಭಕ್ತವೃಂದದವರು ವಹಿಸಿಕೊಳ್ಳಬೇಕಿದೆ ಇದರಿಂದ ಗ್ರಾಮದ ಹೆಸರು ಮತ್ತು ಕೀರ್ತಿ ಇನ್ನಷ್ಟು ಹೆಚ್ಚಿಸಲು ಸಾದ್ಯವಾಗಲಿದೆ ಎಂದರು.

ಗುಂಡಕನಾಳ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ಗುಂಡಕನಾಳ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಶ್ರೀಮಠದ ಮೇಲಿಟ್ಟ ಪ್ರೀತಿ ಮತ್ತು ಭಕ್ತಿ ಕುರಿತು ಕೊಂಡಾಡಿದರಲ್ಲದೇ ಶ್ರೀಮಠಕ್ಕೆ ಭಕ್ತರೇ ಆಸ್ತಿ ಎಂದು ಧರ್ಮದ ಕಾರ್ಯದಲ್ಲಿ ತೊಡಗಿಕೊಂಡಿರುವ ನನಗೆ ಭಕ್ತರ ಶ್ರೇಯಸ್ಸು ಮುಖ್ಯವಾಗಿದೆ ಪ್ರಾಚೀನ ಪರಂಪರೆ ಹೊಂದಿದ ಈ ಮಠದ ಜೀರ್ಣೋದ್ದಾರದ ಕಾರ್ಯಕ್ಕೆ ಅನೇಕ ಹಿರಿಯರು ಈಗಾಗಲೇ ಚರ್ಚಿಸಿದ್ದು ಮುಂದಿನ ದಿನಗಳಲ್ಲಿ ಶ್ರೀಮಠವನ್ನು ಜೀರ್ಣೋದ್ದಾರ ಗೊಳಿಸಲಿದ್ದಾರೆಂದು ವಿಸ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುಂಚೆ ಬೆಳಿಗ್ಗೆ ಬ್ರಾಹ್ಮಿ ಮೂಹೋರ್ತದಲ್ಲಿ ಲಿಂಗೈಕ್ಯ ಶ್ರೀಗಳ ಕರ್ತೃಗದ್ದುಗೆಗೆ ರುದ್ರಾಭಿಷೇಕ, ಹಾಗೂ ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯ ಮೇಲೆ ಸಗರ ಹಿರೇಮಠದ ಶ್ರೀ ಸೋಮಶೇಖರ ಶಿವಾಚಾರ್ಯರು, ಬಳವಾಟದ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಚಿಮ್ಮಲಗಿಯ ಶ್ರೀ ಸಿದ್ದರೇಣುಕ ಶಿವಾಚಾರ್ಯ ಮಹಾಸ್ವಾಮಿಗಳು, ಗುಳೇದಗುಡ್ಡದ ಶ್ರೀ ರೇವಣಸಿದ್ಧ ದೇವರು, ಕೊಡಗಾನೂರಿನ ಶ್ರೀ ಕುಮಾರ ದೇವರು, ಪ್ರವಚನಕಾರ ವೇ.ದೊಡ್ಡಬಸಯ್ಯ ಶಾಸ್ತ್ರೀಗಳು, ಮೊದಲಾದವರು ಉಪಸ್ಥಿತರಿದ್ದರು.

# ಅಕ್ರಮ ಗಾಂಜಾ ಬೆಳೆ: ಇಬ್ಬರ ಬಂಧನ 79 ಲಕ್ಷ ಮೌಲ್ಯದ 228 ಕೆಜಿ ಗಾಂಜಾ ಗಿಡ ಜಪ್ತಿ



**ವಿಜಯಪುರ :** ಕಬ್ಬು ಹಾಗೂ ಮೆಕ್ಕೆಜೋಳ ಬೆಳೆಗಳ ಮಧ್ಯೆ ಅಕ್ರಮ ಗಾಂಜಾ ಬೆಳೆದಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿ, 79,80,000 ರೂ.ಗಳ ಮೌಲ್ಯದ ಒಟ್ಟು 228 ಕಿಲೋ ಹಸಿ ಗಾಂಜಾ ಗಿಡಗಳನ್ನು ಜಪ್ತಿ ಮಾಡಿರುವ ಘಟನೆ ಜಿಲ್ಲೆಯ ತಿಕೋಟಾ ತಾಲೂಕಿನ ಯತ್ನಾಳ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ಮಲ್ಲು ಗೋವಿಂದ ಕರ್ವೆ (60), ಮನಿಗೇನಿ ಗೋವಿಂದ ಕರ್ವೆ (63) ಬಂಧಿತ ಆರೋಪಿಗಳು.

ಈ ಆರೋಪಿಗಳು ಯತ್ನಾಳ ಗ್ರಾಮದ ತಮ್ಮ 1.37 ಎಕರೆ ಜಮೀನಿನ ಕಬ್ಬು, ಮೆಕ್ಕೆಜೋಳ ಬೆಳೆಗಳ ಮಧ್ಯೆ ಅಕ್ರಮವಾಗಿ ಗಾಂಜಾ ಬೆಳೆದಿರುವ ಖಚಿತ ಮಾಹೀತಿ ಆಧರಿಸಿ ಎಸ್ಪಿ ಲಕ್ಷ್ಮಣ ನಿಂಬರಗಿ, ಎಎಸ್ಪಿಗಳಾದ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ ಮಾರ್ಗದರ್ಶನದಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆ ಡಿಎಸ್‌ಪಿ ಸುನೀಲ ಕಾಂಬಳೆ, ಸಿಪಿಐ ರಮೇಶ ಅವಜಿ, ಪಿಎಸ್‌ಐ ಮಲ್ಲಿಕಾರ್ಜುನ ತಳವಾರ ಸೇರಿದಂತೆ ಸಿಬ್ಬಂದಿ ತಂಡ ಆರೋಪಿಗಳನ್ನು ಬಂಧಿಸಿ, 79,80,000 ರೂ.ಗಳ ಮೌಲ್ಯದ ಒಟ್ಟು 228 ಕಿಲೋ ಹಸಿ ಗಾಂಜಾ ಗಿಡಗಳನ್ನು ಜಪ್ತಿ ಮಾಡಿದ್ದಾರೆ.

ವಿಜಯಪುರ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತೇರದಾಳ ಪುರಸಭೆ 3.84 ಲಕ್ಷ ಉಳಿತಾಯ ಬಜೆಟ್ ಮಂಡನೆ

**ತೇರದಾಳ :** ಪ್ರಸಕ್ತ 2025–26 ನೇ ಸಾಲಿನ ಸ್ಥಳೀಯ ಪುರಸಭೆಯ ಉಳಿತಾಯ ಬಜೆಟ್ ಮಂಡನೆ ಸಭೆ ಮಂಗಳವಾರ ಪುರಸಭೆ ಸಭಾ ಭವನದಲ್ಲಿ ಜರುಗಿತು. ಪುರಸಭೆ ಅಧ್ಯಕ್ಷೆ ಶಿಲ್ಪಾ ಗೌತಮ ರೋಡಕರ 3.84 ಉಳಿತಾಯ ಬಜೆಟ್ ಮಂಡಿಸಿ ಸಭೆಯ ಅನುಮೋದನೆ ಪಡೆದರು.

ಇನ್ನು ಸಭೆ ಪ್ರಾರಂಭಗೊಳ್ಳುತ್ತಿದ್ದಂತೆ ಪುರಸಭೆಯಲ್ಲಿ ಸದಸ್ಯರಿಗೆ ಸರಿಯಾದ ಗೌರವ ಸಿಗುತ್ತಿಲ್ಲ. ಲಿಖಿತವಾಗಿ ಲೆಕ್ಕಪತ್ರ ವಿಭಾಗದ ಹಾಗೂ ಅಭಿಯಂತರರಿಗೆ ಲಿಖಿತವಾಗಿ ಮಾಹಿತಿ ಕೇಳಿದರೂ ಮಾಹಿತಿ ನೀಡುವುದಿಲ್ಲ. ಸದಸ್ಯರ ಸ್ಥಿತಿ ಹೀಗಾದರೆ ಸಾರ್ವಜನಿಕರ ಪರಸ್ಥಿತಿ ಏನು ಎಂದು ಸದಸ್ಯರಾದ ಸಂತೋಷ ಜಮಖಂಡಿ, ಸಚಿನ ಕೊಡತೆ ಪ್ರಶ್ನಿಸಿದರು. ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಿ. ಸದಸ್ಯರಿಗೆ ಗೌರವ ನೀಡಿ, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಿ ಎಂದು ಸಲಹೆ ನೀಡಿದರು. ಇದಕ್ಕೆ ಶೆಟ್ಟೆಪ್ಪ ಸುಣಗಾರ ಕೂಡ ಧ್ವನಿಗೂಡಿಸಿದರು. ಇ–ಖಾತೆ ಉತಾರಕ್ಕಾಗಿ ಸಾರ್ವಜನಿಕರು ಪುರಸಭೆಗೆ ಅಲೆದಾಡುವಂತಾಗಿದೆ.

ಸಾರ್ವಜನಿಕರಿಗೆ ಮೊದಲೆ ದಾಖಲೆಗಳ ಕುರಿತು ಸೂಕ್ತ ಮಾಹಿತಿ ನೀಡಬೇಕು. ಸಾಧ್ಯವಾದಷ್ಟು ಸಹಕಾರ ನೀಡುವ ಕೆಲಸ ಮಾಡಿ ಎಂದು ಹಾಫೀಜ್ ಮೌಲಾಅಲಿ, ಚಿತ್ರಬಾನುಕೋಟೆ, ಫಯಾಜ್ ಇನಾಮದಾರ, ಶೆಟ್ಟೆಪ್ಪ ಸುಣಗಾರ ಮುಖ್ಯಾಧಿಕಾರಿಗಳಿಗೆ ಹೇಳಿದರು. ಈ ವೇಳೆ ತೆರಿಗೆ ವಸೂಲಿಗಾರ ಸಿಬ್ಬಂದಿ ಜೊತೆಗೆ ಸದಸ್ಯರ ಮಾತಿನ ಚಕಮಕಿ ನಡೆಯಿತು. ಕಾಮಗಾರಿಗಳ ಟೆಂಡರ್ ವಿಷಯದಲ್ಲಿ ಅಧಿಕಾರಿಗಳು ಪಾರದರ್ಶಕವಾಗಿ



ಕೆಲಸ ಮಾಡಿ. ನೀವು ಹೆಸರು ಹಾಳು ಮಾಡಿಕೊಳ್ಳಬೇಡಿ. ಗುತ್ತಿಗೆದಾರರಿಗೂ ಅನ್ಯಾಯ ಮಾಡಬೇಡಿ ಎಂದು ಸಚಿನ್ ಕೊಡತೆ ತಿಳಿ ಹೇಳಿದರು.

ಬೀದಿ ದೀಪ ಅಳವಡಿಕೆ, ಗುತ್ತಿಗೆದಾರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ಆದ್ದರಿಂದ ಗುತ್ತಿಗೆದಾರನಿಗೆ ತಾಕೀತು ಮಾಡಿ ಇಲ್ಲವೇ ಟೆಂಡರ್ ರದ್ದುಗೊಳಿಸಿ ಎಂದು ಮುಖ್ಯಾಧಿಕಾರಿಗಳಿಗೆ ಎಲ್ಲ ಸದಸ್ಯರು ಒತ್ತಾಯಿಸಿದರು.

ಬಿ – ಖಾತೆ ಕುರಿತು ಜಾಗೃತಿ ಮೂಡಿಸಿ ಸರಕಾರ ಅನಧಿಕೃತ ಕಟ್ಟಡಗಳನ್ನು ಸಕ್ರಮ ಮಾಡಿಕೊಳ್ಳಲು ಬಿ–ಖಾತೆ ಅನುಷ್ಠಾನಗೊಳಿಸಿದೆ. ಆದ್ದರಿಂದ ಪುರಸಭೆ ಅಧಿಕಾರಿಗಳು ಈ ಕುರಿತು ಪುರಸಭೆ 23 ವಾರ್ಡಗಳ ವ್ಯಾಪ್ತಿಯಲ್ಲಿ ಜನ ಜಾಗೃತಿ ಮೂಡಿಸಬೇಕು. ಸಿಬ್ಬಂದಿಗಳಿಗೆ ಆಯಾ ಭಾಗಗಳನ್ನು ವಿಭಾಗಿಸಿ ಕೆಲಸಕ್ಕೆ ನೇಮಿಸಬೇಕೆಂದು ಶೆಟ್ಟೆಪ್ಪ ಸುಣಗಾರ ಆಗ್ರಹಿಸಿದರು. ಇದರಿಂದ ಪುರಸಭೆಗೂ ಆದಾಯ ಬರುತ್ತದೆ ಹಾಗೂ ಜನ ಸಾಮಾನ್ಯರಿಗೂ ಸಹಾಯ ಆಗುತ್ತದೆ ಎಂದು ಹೇಳಿದರು. ಈಗಾಗಲೇ ಎಲ್ಲ ಸದಸ್ಯರಿಗೆ ಬಿ–ಖಾತೆ ಕುರಿತು ತಿಳುವಳಿಕೆ ಪತ್ರ ನೀಡಲಾಗಿದೆ. ಸಾರ್ವಜನಿಕರಿಗೂ ಜಾಗೃತಿ ಮೂಡಿಸಲಾಗುವುದು ಎಂದು ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ತಿಳಿಸಿದರು.

ನಾಮ ನಿರ್ದೇಶಿತರಿಗೆ ಸನ್ಮಾನ– ಸರಕಾರದಿಂದನಾಮನಿರ್ದೇಶಿತಸದಸ್ಯರಾಗಿ ನೇಮಕಗೊಂಡಿರುವ ಮಹೇಶ ಕಾಲತಿಪ್ಪಿ, ಲಕ್ಷ್ಮಣ ಮಾಸ್ತಿ, ಗೋಪಾಲ ಮಾಂಗ, ಸಂಜು ಹಾಡಕರ ಹಾಗೂ ಮೆಹಬೂಬ ಜಮಾದಾರ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಉಪಾಧ್ಯಕ್ಷೆ ನಸ್ರೀನ್ಬಾನು ನಗಾರ್ಜಿ, ಸ್ಥಾಯಿ ಸಮಿತಿ ಚೇರಮನ್ ಕುಮಾರ ಸರಿಕರ, ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಕಂದಾಯ ಅಧಿಕಾರಿ ಎಫ್. ಬಿ. ಗಿಡ್ಡಿ, ಪಜಲ್ ಅತಾರಾವುತ, ಆಧಿನಾಥ ಸಪ್ತಸಾಗರ, ಅಕ್ಕುತಾಯಿ ಕಾಂಬಳೆ, ಜೆಇ ಭಾಗ್ಯಶ್ರೀ ಪಾಟೀಲ, ಪ್ರತಾಪ ಕೊಡುಗೆ, ಇರ್ಫಾನ್ ಝಾರೆ ಇನ್ನಿತರರು ಉಪಸ್ಥಿತರಿದ್ದರು.

**ಸಭೆ ಮುಖ್ಯಾಂಶಯಗಳು :**

* ನೀರಿನ ಕರ ಪ್ರತಿ ತಿಂಗಳು 5 ರೂ ಹೆಚ್ಚಳ,
* ಆಸ್ತಿ ತೆರಿಗೆ ಶೇಕಡಾ 3 ಪ್ರತಿಶತ ಹೆಚ್ಚಳ,
* ವಾಣಿಜ್ಯ ಮಳಿಗೆಗಳಿಗೆ ಶೇಕಡಾ ಹತ್ತರಷ್ಟು ಬಾಡಿಗೆ ಹೆಚ್ಚಳ,
* ವಾಣಿಜ್ಯ ಮಳಿಗೆಗಳಿಗೆ ಶೇಕಡಾ 18 ರಷ್ಟು ಪ್ರತಿಶತ ಜಿಎಸ್ಟಿ ಅನ್ವಯಿಸುತ್ತದೆ.

# ಅಧಿಕಾರ ಶಾಶ್ವತವಲ್ಲ ಸೇವೆ ಶಾಶ್ವತ



**ರಬಕವಿ–ಬನಹಟ್ಟಿ :** ಅಧಿಕಾರ ಶಾಶ್ವತವಲ್ಲ ಸೇವೆ ಶಾಶ್ವತ. ಗ್ರಾಮಗಳ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುವೆ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ತಾಲೂಕಿನ ನಾವಲಗಿ ಗ್ರಾಮದಲ್ಲಿ ನೂತನ ಗ್ರಾಮ ಪಂಚಾಯತ ಕಾರ್ಯಾಲಯ ಹಾಗೂ ಎರಡು ಶುದ್ಧ ನೀರಿನ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಅಧಿಕಾರದಲ್ಲಿರುವಷ್ಟು ದಿನ ಒಳ್ಳೆಯ ಕೆಲಸ ಮಾಡುವುದು ನಮ್ಮ ಕರ್ತವ್ಯ. ನಾವು ಎಷ್ಟು ವರ್ಷ ಅಧಿಕಾರದಲ್ಲಿದ್ದೇವೆ ಎಂಬುದು ಮುಖ್ಯವಲ್ಲ. ನಮ್ಮಿಂದ ಸಮಾಜಕ್ಕೆ ಏನು ಉಪಯೋಗವಾಗಿದೆ ಎಂಬುದು ಬಹಳ ಮುಖ್ಯ. ಪ್ರತಿಯೊಬ್ಬ ಸದಸ್ಯರು ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ಆದ್ಯತೆ ನೀಡುವ ಮೂಲಕ ಗ್ರಾಮವನ್ನು ಸ್ವಚ್ಚ ಹಾಗೂ ಸುಂದರ ಗ್ರಾಮವನ್ನಾಗಿ ರೂಪಿಸಬೇಕು. ಸರ್ಕಾರದಿಂದ ಸಾಕಷ್ಟು ಅನುದಾನಗಳು ಬರುತ್ತವೆ. ಅದರ ಸದ್ಬಳಕೆ ಮಾಡಿಕೊಂಡು ಗ್ರಾಮದಲ್ಲಿ ಮೂಲಭೂತ ಸೌಕರ್ಯಕ್ಕೆ ಕೊರತೆಯಾಗದಂತೆ ಕಾಳಜಿ ವಹಿಸಿದರೆ ನಿಜಕ್ಕೂ ಜನಪ್ರತಿನಿಧಿಯಾಗಿದ್ದಕ್ಕೆ ಸಾರ್ಥಕವಾಗುತ್ತದೆ ಎಂದರು.

ನಂತರ ಜಮಖಂಡಿಯ ಮುತ್ತಿನಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಸದಾಶಿವ ಸವದಿ, ಉಪಾದ್ಯಕ್ಷ ಮುತ್ತವ್ವ ಭಜಂತ್ರಿ, ದಾನಪ್ಪ ಆಸಂಗಿ, ಬಸವರಾಜ ಗಣಿ, ಆನಂದ ಕಂಪು, ಈರಪ್ಪ ವಾಲಿ, ಅಲ್ಲಪ್ಪ ಮುಗಳಖೋಡ, ಈರಪ್ಪ ಕಡಕಬಾವಿ, ಗಂಗಪ್ಪ ಅಮ್ಮಲಜೇರಿ, ಹಣಮಂತ ಮಗದುಮ, ರೇಖಾ ಕಾಂತಿ, ಆರತಿ ಸಂಗಾನಟ್ಟಿ, ದೊಡ್ಡವ್ವ ಅಮ್ಮಜಗೋಳ, ಸರ್ವ ಸದಸ್ಯರು ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿ ಪ್ರವೀಣ ಶಿರಬೂರ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ಮಧುರಖಂಡಿಯ ವಿಶಿಷ್ಟ ಕಲಾವಿದ ಅಶೋಕ ಬಡಿಗೇರ


## ಇಪ್ಪತ್ತೈದಕ್ಕೂ ಹೆಚ್ಚು ಗೋಪುರಗಳ ನಿರ್ಮಾಣ | ಸಿಮೆಂಟ್ ಮೂಲಕ ಬೃಹತ್ ಆನೆಗಳ ಪ್ರತಿಕೃತಿ ನಿರ್ಮಾಣ | ಮಣ್ಣಿನ ಮತ್ತು ಸಿಮೆಂಟ್ ಮೂರ್ತಿಗಳ ತಯಾರಿಕೆ

* ಕಿರಣ ಶ್ರೀಶೈಲ ಆಳಗಿ

**ರಬಕವಿ–ಬನಹಟ್ಟಿ :** ಸಮೀಪದ ಮಧುರಖಂಡಿಯ ಅಶೋಕ ಬಡಿಗೇರ ವಿಶಿಷ್ಟ ಕಲಾವಿದರು. ಸಿಮೆಂಟ್ ಮೂರ್ತಿ, ಗೋಪುರ, ದ್ವಾರ ಬಾಗಿಲುಗಳು, ಬುತ್ತಿ ಪೂಜೆ ಮಾಡುವುದರ ಜೊತೆಗೆ ಮೂರ್ತಿಗಳಿಗೆ ಬಣ್ಣವನ್ನು ನೀಡುವ ಕಲಾವಿದರು ದೇವಾಲಯಗಳು ಸೇರಿದಂತೆ ವಿವಿಧ ಮಠಗಳ ಗೋಪುರ ಮತ್ತು ದ್ವಾರ ಬಾಗಿಲುಗಳನ್ನು ನಿರ್ಮಾಣ ಮಾಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಅಂದಾಜು 60 ಆಸುಪಾಸಿನ ಅಶೋಕ ತಮ್ಮ ಹದಿನೈದನೆ ವಯಸ್ಸಿನಲ್ಲಿಯೇ



ಮೂರ್ತಿಗಳನ್ನು ನಿರ್ಮಾಣ ಮಾಡಲು ಆರಂಭಿಸಿದರು. ಅವರ ತಂದೆ ಪಾಂಡಪ್ಪ ಕೂಡಾ ಮೂರ್ತಿ ತಯಾರಕರು. ತಂದೆಯಿಂದ ಬಳುವಳಿಯಾಗಿ ಬಂದ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಮ್ಯಾಟ್ರಿಕ್ಯೂಲೇಶನ್ ವರೆಗೆ ಮಾತ್ರ ಶಾಲೆಗೆ ಹೋಗಿದ್ದ ಅಶೋಕ, ಶಾಲೆಯಲ್ಲಿ ಅನೇಕ ಚಿತ್ರಗಳನ್ನು ಬಿಡಿಸುವುದರ ಮೂಲಕ ಗಮನ ಸೆಳೆದಿದ್ದರು. ನಂತರ ತಂದೆಯ ಜೊತೆಗೂಡಿ ಮೂರ್ತಿ ತಯಾರಿಕೆಯಲ್ಲಿ ತೊಡಗಿದರು.

ಈ ಮೊದಲು ಗಣೇಶೋತ್ಸವದ ಸಂದರ್ಭದಲ್ಲಿ ಪ್ರಮುಖ ನಗರಗಳಲ್ಲಿ ಹತ್ತು, ಹದಿನೈದು ಅಡಿ ಎತ್ತರದ ಟೆಂಗಿನಕಾಯಿ ಮತ್ತು ವಿಭೂತಿಗಳನ್ನು ಗಣೇಶ ವಿಗ್ರಹಗಳನ್ನು ಮಾಡಿ ಗಮನ ಸೆಳೆದಿದ್ದರು.

ಮೊದಲು ಸಿಮೆಂಟ್ ಮೂರ್ತಿಗಳನ್ನು ಮಾಡಲು ಆರಂಭಿಸಿದರು. ನಂತರ ಗೋಪುರನಿರ್ಮಾಣಗಳಲ್ಲಿತೊಡಗಿದರು. ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರದ ಪ್ರಮುಖ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ದೇವಸ್ಥಾನ ಮತ್ತು ಮಠಗಳ ಗೋಪುರಗಳನ್ನು ನಿರ್ಮಾಣ ಮಾಡುವುದರ ಮೂಲಕ ಗಮನ ಸೆಳೆದಿದ್ದಾರೆ. ಅಂದಾಜು 65 ಅಡಿ ಎತ್ತರದ ಗೋಪುರವನ್ನು ನಿರ್ಮಾಣ ಮಾಡಿದ್ದಾರೆ. ಕೇವಲ ಗೋಪುರಗಳು ಅಷ್ಟೆ ಅಲ್ಲದೆ ದ್ವಾರಬಾಗಿಲುಗಳನ್ನು ಮಾಡಿದ್ದಾರೆ. ಗೋಪುರ ಮತ್ತು ದ್ವಾರ ಬಾಗಿಲುಗಳಲ್ಲಿ ಪ್ರತಿಷ್ಠಾಪಿಸುವ ಮೂರ್ತಿಗಳಿಗೂ ಕೂಡಾ ಜೀವ ತುಂಬಿದ್ದಾರೆ. ಮೂರ್ತಿಗಳಿಗೆ ಬಣ್ಣ ಕೂಡಾ ನೀಡುತ್ತಾರೆ.

ಅವರ ಮೂರ್ತಿಗಳು ಮತ್ತು ಗೋಪುರಗಳು ಬಹಳಷ್ಟು ಜನರ ಗಮನ ಸೆಳೆದಿವೆ. ಅವರ ಮೂರ್ತಿಗಳಂತೂ ನೋಡುಗರಲ್ಲಿ ಭಕ್ತಿಯ ಭಾವವನ್ನು ತುಂಬುತ್ತವೆ.

**ಅಶೋಕ ಬಡಿಗೇರ ಅವರು ರಚಿಸಿದ ಮೂರ್ತಿಗಳು ಬಹಳಷ್ಟು ಸುಂದರವಾಗಿವೆ. ನಮ್ಮ ಮಠದಲ್ಲಿಯೂ ಕೂಡಾ ಸಿಮೆಂಟ್ ಆನೆಗಳನ್ನು ಕಡಿಮೆ ಖರ್ಚಿನಲ್ಲಿ ಮಾಡಿ ಮಠದಲ್ಲಿ ನಿರ್ಮಾಣವಾಗಿರುವ ಗುರು ಭವನಕ್ಕೂ ಸುಂದರವಾಗಿ ಬಣ್ಣವನ್ನು ನೀಡಿದ್ದಾರೆ.**

**| ಗುರುಸಿದ್ಧೇಶ್ವರ ಸ್ವಾಮೀಜಿ**
**ಬ್ರಹ್ಮಾನಂದ ಆಶ್ರಮ, ರಬಕವಿ.**

# ಧರ್ಮಸ್ಥಳ ಯೋಜನೆಯಿಂದ ಸಮಾಜಮುಖಿ ಕಾರ್ಯ



**ಗುಳೇದಗುಡ್ಡ :** ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ವತಿಯಿಂದ ಹಾನಾಪೂರ ಎಸ್.ಪಿ. ಗ್ರಾಮದ ವಾಗ್ದೇಯಿದೇವಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಧರ್ಮಸ್ಥಳದ ಧರ್ಮಧಿಕಾರಿಗಳಾದ ಪೂಜ್ಯ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ರೂ.2,00,000 ದೇಣಿಗೆ ನೀಡಿದ್ದಾರೆ.

ಬಾಗಲಕೋಟ ಜಿಲ್ಲಾ ನಿರ್ದೇಶಕ ಚನ್ನಕೇಶವ ಅವರು ದೇವಸ್ಥಾನಕ್ಕೆ ಚೆಕ್ ಹಸ್ತಾಂತರಿಸಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ತಾಲೂಕಿನಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವ್ಯಕ್ತಿಯ ವ್ಯಕ್ತಿತ್ವಬದಲಾವಣೆ,ಕುಟುಂಬ ಸುಧಾರಣೆ,ಗ್ರಾಮಗಳ ಅಭಿವೃದ್ಧಿಯ ಉದ್ದೇಶದಿಂದ ಕಾರ್ಯಕ್ರಮಗಳ ಅನುಷ್ಠಾನ ಮಾಡುತ್ತಿದೆ. ದೇವಸ್ಥಾನ ಮತ್ತು ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ, ವೃತ್ತಿ ಶಿಕ್ಷಣ ಪಡೆಯುವ ಮಕ್ಕಳಿಗೆ ಶಿಷ್ಯ ವೇತನ ಹೀಗೆ ಹಲವು ಕಾರ್ಯ ಯೋಜನೆ ರೂಪಿಸಿದ್ದಾರೆ. ಇಲ್ಲಿಯವರೆಗೆ ಬಾದಾಮಿ ತಾಲೂಕಿನಲ್ಲಿ 5 ಕೆರೆಗಳ ಅಭಿವೃದ್ಧಿ ಪಡಿಸಲಾಗಿದೆ. ಆ ಮೂಲಕ ಜನ ಜಾನುವಾರುಗಳ ನೀರಿನ ಸಮಸ್ಯೆಗೆ ಪರಿಹಾರ ಕೊಡುವ ಕೆಲಸ ಮಾಡಲಾಗುತ್ತಿದೆ ಎಂದರು.

ಮುಖಂಡರಾದ ಗೋಪಾಲ್ ಭಟ್ಟಡ ಮಾತನಾಡಿ, ಪೂಜ್ಯರಕಾರ್ಯಕ್ರಮನಮ್ಮೆಲ್ಲರಿಗೆಮಾದರಿಯಾಗಿದೆ. ಪ್ರತಿಯೊಬ್ಬರೂ ಧರ್ಮಸ್ಥಳ ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಹುಲ್ಲಪ್ಪ ಚವಾಣ್, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಅಶೋಕನಾಯಿನೆಗಲಿ,ತಾಲೂಕುಯೋಜನಾಧಿಕಾರಿ ಮಹಾಂತೇಶ್, ಮುಖಂಡರಾದ ಗಣೇಶ ನಾಯಕ, ಕೆ.ಪಿ.ರಾಠೋಡ್, ಆರ್.ಕೆ.ಪಮ್ಮಾರ, ವಲಯದ ಮೇಲ್ವಿಚಾರಕ ಮಲ್ಲಿಕಾರ್ಜುನ, ಸೇವಾಪ್ರತಿನಿಧಿ ಪುಷ್ಪ ಇತರರು ಇದ್ದರು.

# ಹಳ್ಳ ಹಿಡಿದ ಕುಡಿಯುವ ನೀರಿನ ಯೋಜನೆ

## ಬನಹಟ್ಟಿಯಲ್ಲಿ ವೈಫಲ್ಯಗೊಂಡ ಯೋಜನೆ ರಬಕವಿಯಲ್ಲಿ ಯಶಸ್ವಿಯಾದೀತೆ..!?

* ಮಲ್ಲಿಕಾರ್ಜುನ ತುಂಗಳ

**ರಬಕವಿ–ಬನಹಟ್ಟಿ:**ಬರೋಬ್ಬರಿ5ವರ್ಷಗಳ ಹಿಂದೆ ಕರ್ನಾಟಕ ನೀರು ಸರಬರಾಜು ಮಂಡಳಿ ಅಧೀನದಲ್ಲಿ ನಗರೋತ್ಥಾನ ಯೋಜನೆಯಡಿ ರಬಕವಿ–ಬನಹಟ್ಟಿ ನಗರಸಭೆಯ ಬನಹಟ್ಟಿ ಪಟ್ಟಣದಲ್ಲಿ ಸುಮಾರು 30 ಕೋಟಿ ರೂ.ಗಳ ವೆಚ್ಚದಲ್ಲಿ ನಡೆದ ಕುಡಿಯುವ ನೀರು ಯೋಜನೆಯ ಕಾಮಗಾರಿಯು ಸಂಪೂರ್ಣ ಹಳ್ಳ ಹಿಡಿದಿದೆ.

90 ಕಿ.ಮೀನಷ್ಟು ಪಟ್ಟಣದ ರಸ್ತೆಗಳಲ್ಲಿ 6,763 ಮನೆಗಳಿಗೆ ನೀರು ಪೂರೈಕೆಯ ಪೈಪ್‌ಲೈನ್ ಅಳವಡಿಕೆ ಮಾಡಲಾಗಿದೆ. ಇಲ್ಲಿಯವರೆಗೂ ಒಂದು ಹನಿಯೂ ನೀರು ಬಾರದೆ ಅದೇ ಓಬೇರಾಯನ ಕಾಲದ ಪೈಪ್‌ಲೈನ್ ಮೂಲಕವೇ ನೀರು ಸರಬರಾಜು ಆಗುವಲ್ಲಿ ಕಾರಣವಾಗಿದೆ.

ಇದೀಗ ರಬಕವಿಯಲ್ಲಿ ಇದೀಗ ಅಮೃತ–2.0 ಹೆಸರಿನಡಿ 34.47 ಕೋಟಿ ರೂ.ಗಳ ವೆಚ್ಚದಲ್ಲಿ 90 ಕಿ.ಮೀ.ನಷ್ಟು 4650 ಮನೆಗಳಿಗೆ ಪೈಪಲೈನ್ ಅಳವಡಿಕೆಗೆ ಕಾಮಗಾರಿ ಶುರುವಾಗಿದೆ.

ಮರೆಯಾದ ಮೀಟರ್‌ಗಳು: ಬನಹಟ್ಟಿಯ ಎಲ್ಲ 6,763 ಮನೆಗಳ ಮುಂದೆ ನೀರು ಬಳಕೆಯ ಮೀಟರ್ ಅಳವಡಿಕೆ ಮಾಡಿ ನಾಲ್ಕು ವರ್ಷಗಳೇ ಗತಿಸಿವೆ. ಇದೀಗ ಒಂದೇ ಒಂದು ಮೀಟರ್ ಯಾವ ಮನೆಯ ಮುಂದೆಯೂ ಕಾಣಸಿಗುತ್ತಿಲ್ಲ. ಹೀಗಾಗಿ ಕಾಮಗಾರಿ ಸಂಪೂರ್ಣ ವೈಫಲ್ಯಕ್ಕೆ ಕಾರಣವಾಗಿದೆ.

ನಗರಸಭೆ ಹಸ್ತಾಂತರ ವಿವಾದ: ಪರಿಪೂರ್ಣವಾಗಿ ಕಾಮಗಾರಿ ನಡೆಸದೆ ನಗರಸಭೆಗೆ ಹಸ್ತಾಂತರಿಸಿದ್ದಾರೆಂಬ ಆರೋಪ ಅಧಿಕಾರಿಗಳದ್ದಾಗಿದ್ದರೆ, ಇತ್ತ ಸಾರ್ವಜನಿಕರಿಂದ ನಗರಸಭೆ ಭರಣಾವಾಗಬೇಕಾದ ಕುಡಿಯುವ ನೀರಿನ ಬಿಲ್ ಬಾರದ ಕಾರಣ ಕೋಟ್ಯಾಂತರ ರೂ. ಹಾನಿ ಅನುಭವಿಸುವಲ್ಲಿ ನಗರಸಭೆ ಕಾರಣವಾಗಿದೆ.

ಸದ್ಬಳಕೆಯಾಗದ ಯೋಜನೆಗಳು: ನಗರಸಭೆಯಾಗಿರುವ ರಬಕವಿ–ಬನಹಟ್ಟಿಗೆ ರಾಜ್ಯ ಹಾಗು ಕೇಂದ್ರ ಸರ್ಕಾರದಿಂದ ಸಮರ್ಪಕವಾಗಿ ಯೋಜನೆಗಳನ್ನು ಬಳಕೆ ಮಾಡುವಲ್ಲಿ ವೈಫಲ್ಯ ಕಂಡಿದೆ.

ಈ ಕುರಿತು ಅಧಿಕಾರಿಗಳು, ನಗರಸಭಾ ಸದಸ್ಯರು ಮುತುವರ್ಜಿ ವಹಿಸಿ ಸಾರ್ವಜನಿಕರಿಗೆ ದೊರಕಬೇಕಾದ ಸೌಲಭ್ಯ ಹಾಗು ಯೋಜನೆಗಳನ್ನು ಪ್ರಾಮಾಣಿಕವಾಗಿ ತಲುಪಿಸುವಂತ ವ್ಯವಸ್ಥೆಯಾಗಬೇಕಿದೆ.





**'ನಗರೋತ್ಥಾನದ ಯೋಜನೆಯು ಹಿಂದಿನ ಅಧಿಕಾರಿಗಳ ಸಂದರ್ಭ ಹಸ್ತಾಂತರಗೊಂಡಿದೆ. ಈ ಕುರಿತು ಪರಾಮರ್ಶಿಸಿ ಪ್ರಗತಿ ಪರಿಶೀಲಿಸಲಾಗುವದು. ಅಮೃತ–2 ಯೋಜನೆಯಡಿ ಕುಡಿಯುವ ನೀರು ಯೋಜನೆ ಟೆಂಡರ್ ಮುಕ್ತಾಯಗೊಂಡಿದ್ದು, ಈಗಷ್ಟೇ ಯೋಜನೆ ನಗರದಲ್ಲಿ ನಡೆಯಲಿದೆ'.**

**– ಜಗದೀಶ ಈಟಿ,**
**ಪೌರಾಯುಕ್ತರು, ರಬಕವಿ–ಬನಹಟ್ಟಿ.**

**'ಈ ಕುರಿತು ನೀರು ಸರಬರಾಜು ಮಂಡಳಿಯಿಂದ ಮಾಹಿತಿ ಪಡೆದು ಮೀಟರ್ ಅಳವಡಿಕೆ ಯೋಜನೆ ಬಗ್ಗೆ ಸರ್ವ ಸದಸ್ಯರ ವಿಶ್ವಾಸದಿಂದ ಕಾಮಗಾರಿಗೆ ನ್ಯಾಯ ಒದಗಿಸುವೆ'.**

**– ವಿದ್ಯಾ ಪ್ರವೀಣ ದಭಾಡಿ,**
**ಅಧ್ಯಕ್ಷರು, ನಗರಸಭೆ, ರಬಕವಿ–ಬನಹಟ್ಟಿ.**

**'ಈಗಾಗಲೇ ಬನಹಟ್ಟಿಯಲ್ಲಿ ನಡೆದಿರುವ ಕಾಮಗಾರಿ ಸಂಪೂರ್ಣ ವಿಫಲಗೊಂಡಿದೆ. ರಬಕವಿಯಲ್ಲಿಯೂ ಯಾವದೇ ಅಧಿಕಾರಿ ಅಥವಾ ಸದಸ್ಯರಿಗೆ ಸಮಗ್ರ ಮಾಹಿತಿಯಿಲ್ಲದೆ ಕೆಲಸ ಪ್ರಾರಂಭಗೊಂಡಿದೆ. ಸಂಪೂರ್ಣ ಮಾಹಿತಿಯೊಂದಿಗೆ ಕೆಲಸ ಪ್ರಾರಂಭೀಸಬೇಕು'.**

**– ಯಲ್ಲಪ್ಪ ಕಟಗಿ, ನಗರಸಭಾ ಸದಸ್ಯ.**

# ಕಾ.ನಿ.ಪ. ಸಂಘದ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2025–26ನೇ ಸಾಲಿನ ಗುರುತಿನ ಚೀಟಿಯ ಸದಸ್ಯತ್ವ ನವೀಕರಣಮಾಡಲುಮಾರ್ಚ5ರ ಒಳಗೆ ಅರ್ಜಿ ತುಂಬಿ ಕೂಡುವಂತೆ ಕಾ ನಿ ಪ ಸಂಘದ ಬಾಗಲಕೋಟೆ ಜಿಲ್ಲಾ ಘಟಕ ಅಧ್ಯಕ್ಷರಾದ ಆನಂದ ದಲಭಂಜನ,ಪ್ರಧಾನ ಕಾ0ರ್ುದರ್ಶಿ ಶಂಕರ ಕಲ್ಯಾಣಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಕಾರ್ಡ ನವೀಕರಣ ಮಾಡುವ ಕುರಿತು ಜಿಲ್ಲಾ ಕಾ0ರ್ುಕಾರಿ ಸಮಿತಿ0ುಲ್ಲಿ ಚರ್ಚೆ ನಡಸಿಲಾಗಿದ್ದು,ಕಳೆದವರ್ಷದಂತೆ ಈ ಬಾರಿ ನಿಯಮಾವಳಿಗಳನ್ನು ವ್ುುಂದುುವರೆಸಲಾಗಿದೆ. ರಾಜ್ಯ ಘಟಕಕ್ಕೆ ಮಾರ್ಚ 10 ರ ಒಳಗಾಗಿ ಎಲ್ಲಾ ಅರ್ಜಿಗಳನ್ನು ಕಳುುಹಿಸಬೇಕಾಗಿದೆ. ಈ ಬಾರಿಯು ಸಹ ಅರ್ಜಿಯೊಂದಿಗೆ ಸದಸ್ಯರ ಸಂಪೂರ್ಣ ಮಾಹಿತಿ ಹಾಗೂ ವಿಳಾಸದೊಂದಿಗೆ ಅರ್ಜಿಯನ್ನು ಇತ್ತೀಚಿನ ಭಾವಚಿತ್ರ ಹಾಗೂ ಸಂಭಂದಪಟ್ಟ ದಾಖಲೆಗಳನ್ನು ಅರ್ಜಿ0ುೊಂದಿಗೆ ಸಲ್ಲಿಸಬೇಕಾಗಿದೆ.ಅರ್ಜಿ0ುು ಶುಲ್ಕ510 ರೂಪಾಯಿಗಳ ಇದ್ದು,ಆ0ುಾ ತಾಲೂಕ ಘಟಕ ಮೂಲಕ ತಾಲೂಕಿನ ಪತ್ರಕರ್ತರು ಅರ್ಜಿಯನ್ನು ತುಂಬಿ ಕೂಡಬೇಕು..ಜಿಲ್ಲಾ ಮಟ್ಟದ ಪತ್ರಕರ್ತರು, ಪತ್ರಿಕಾ ಭವನ ವ್ಯವಸ್ಥಾಪಕರಾದ ಶಿವು ಗಾಣಿಗೇರ ಅವರಿಗೆ ಪೂರ್ಣ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ಮೂಲಕ ತಿಳಿಸಲಾಗಿದೆ.

# ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ರೈತರು ಆಕ್ಷೇಪಣೆ ಸಲ್ಲಿಸಿ

**ಕೊಪ್ಪಳ :** 2023–24ನೇ ಸಾಲಿನ ಮುಂಗಾರು, ಹಂಗಾಮಿನ ಬೆಳೆ ವಿಮೆಗೆ ಸಂಬಂದಿಸಿದಂತೆ ಬೆಳೆ ಸಮೀಕ್ಷೆಯಲ್ಲಿ ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳನ್ನು ಇತ್ಯರ್ಥಪಡಿಸಲು ರೈತರ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅವರು ತಿಳಿಸಿದ್ದಾರೆ.

2023–24ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯಲ್ಲಿ ಬೆಳೆ ವಿಮೆ ನೊಂದಾಯಿತಿ ಅರ್ಜಿಯೊಂದಿಗೆ ತಾಳೆಯಾಗದೇ ಇರುವ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ತಾಲ್ಲೂಕು (ಕೃಷಿ, ತೋಟಗಾರಿಕೆ, ಬ್ಯಾಂಕ್) ಮಟ್ಟದ ಅಧಿಕಾರಿಗಳಿಗೆ ಪರಿಶೀಲಿಸಲು ಸಂರಕ್ಷಣೆ ತಂತ್ರಾಂಶ ಮೂಲಕ ಕಳುಹಿಸಲಾಗಿತ್ತು, ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಪ್ರಸ್ತಾವನೆಗಳನ್ನುಪರಿಶೀಲಿಸಿಸಂಬಂಧಪಟ್ಟ ವಿಮಾ ಸಂಸ್ಥೆಯವರಿಗೆ ವರ್ಗಾಯಿಸಿ, ಅಂತಿಮವಾಗಿ ವಿಮಾ ಸಂಸ್ಥೆಯವರು ಪ್ರಸ್ತಾವನೆಗಳನ್ನು ಒಪ್ಪಿಗೆ ಅಥವಾ ತಿರಸ್ಕೃತ ಮಾಡಿರುತ್ತಾರೆ.

ಸಂರಕ್ಷಣೆ ತಂತ್ರಾಂಶದನ್ವಯ ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡ ಒಟ್ಟು 92 ಪ್ರಸ್ತಾವನೆಗಳನ್ನು ಈಗಾಗಲೇ ಸಂಬಂದಪಟ್ಟ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರೈತ ಸಂಪರ್ಕ ಕೇಂದ್ರಗಳಿಗೆ ಕಳುಹಿಸಿದ್ದು,

ಇಲಾಖೆಯ ಅಧಿಕಾರಿಗಳಿಗೆ ಈ ಮಾಹಿತಿಯನ್ನು ರೈತರಿಗೆ ನೀಡಲು ಸೂಚಿಸಲಾಗಿದೆ ಹಾಗೂ ಈ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಪ್ರಚಾರ ಪಡಿಸಲಾಗುತ್ತಿದೆ. ಕೊಪ್ಪಳ ತಾಲ್ಲೂಕಿನ 9, ಯಲಬುರ್ಗಾ 35, ಕುಕನೂರು 15, ಗಂಗಾವತಿ 11 ಹಾಗೂ ಕನಕಗಿರಿ ತಾಲ್ಲೂಕಿನ 22 ಸೇರಿ ಕೊಪ್ಪಳ ಜಿಲ್ಲೆಯ ಒಟ್ಟು 92 ಅರ್ಜಿಗಳು 2023–24 ರ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯಲ್ಲಿ ಹೊಂದಾಣಿಕೆಯಾಗದ ಮತ್ತು ವಿಮೆ ಕಂಪನಿಯಿಂದ ತಿರಸ್ಕೃತ ಗೊಂಡಿವೆ.

ಜಿಲ್ಲೆಯ ರೈತ ಬಾಂಧವರು, ತಮ್ಮ ಅರ್ಜಿ ತಿರಸ್ಕೃತಗೊಂಡ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಮರುಪರಿಶೀಲಿಸಲು ಸಂಬಂದಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಮನವಿ ಸಲ್ಲಿಸಬಹುದು. ರೈತರು 2023–24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಪಹಣಿ ಪತ್ರಿಕೆಯಲ್ಲಿ ವಿಮೆಗೆ ನೊಂದಾಯಿಸಿದ ಬೆಳೆ ನಮೂದಾಗಿರಬೇಕು. ಬೆಂಬಲ ಬೆಲೆ ಪ್ರಯೋಜನೆ ಪಡೆದಿದ್ದಲ್ಲಿ ರಶೀದಿ ಅಥವಾ ಎಪಿಎಮ್‌ಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದರೆ ದಾಖಲೆ ಸಲ್ಲಿಸುವುದು.

ಅಕ್ಷೇಪಣೆ ಸಲ್ಲಿಸಿದ ಅರ್ಜಿಗಳನ್ನು ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಮಂಡಿಸಿ, ಕೂಲಕುಂಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ತಾಲ್ಲೂಕು ಮಟ್ಟದ ಸಮಿತಿಯ ನಿರ್ಣಯವನ್ನು ರೈತರು ಒಪ್ಪದಿದ್ದಲ್ಲಿ, ಜಿಲ್ಲಾ ಮಟ್ಟದ ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು. ಜಿಲ್ಲಾ ಮಟ್ಟದ ಸಮಿತಿಯ ನಿರ್ಧಾರವು ಅಂತಿಮವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

# ಇ–ಖಾತಾ ಅಭಿಯಾನದ ಪ್ರಯೋಜನ ಪಡೆಯಿರಿ: ಶಾಸಕ ಬಾಲಚಂದ್ರ ಜಾರಕಿಹೊಳಿ

**ಮೂಡಲಗಿ :** ಪುರಸಭೆ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಅನಧಿಕೃತ ಸ್ವತ್ತುಗಳಿಗೂಸಹ ಇ–ಖಾತಾ ಅಭಿಯಾನವು ನಡೆಯಲಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುವಂತೆ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಕರೆ ನೀಡಿದರು.

ಪುರಸಭೆ ಆವರಣದಲ್ಲಿ ಜರುಗಿದ ಇ – ಖಾತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಅಭಿಯನದಿಂದ ಬಡ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಮೂಡಲಗಿ ಪುರಸಭೆಯ ವ್ಯಾಪ್ತಿಯಲ್ಲಿ ಸುಮಾರು 2500 ಕ್ಕೂ ಹೆಚ್ಚು ಆಸ್ತಿಗಳು ಇ – ಖಾತಾಕ್ಕೆ ಒಳಪಟ್ಟರೆ ಅಂದಾಜು 2 ರಿಂದ 2.50 ಕೋಟಿ ರೂಪಾಯಿಗಳ ಆದಾಯವು ಪುರಸಭೆಗೆ ಹರಿದು ಬರಲಿದೆ. ಫಲಾನುಭವಿಗಳು ತಕ್ಷಣವೇ ಪುರಸಭೆ ಅಧಿಕಾರಿಗಳನ್ನು ಸಂಪರ್ಕಿಸಿ ಇ ಖಾತಾ ಉತಾರಗಳನ್ನು ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳನ್ನು ಸಂಪರ್ಕ ಮಾಡಬೇಡಿ ಎಂದು ಸಲಹೆ ನೀಡಿದ ಅವರು, ಈ ಅಭಿಯಾನವು ಮೇ ತಿಂಗಳ ಅಂತ್ಯದವರೆಗೆ ನಡೆಯಲಿದೆ ಎಂದರು.

ಸ್ಥಳೀಯ ಎಸ್ಸಿ ಕಾಲನಿಯ ಸುಮಾರು 300 ಕುಟುಂಬಗಳಿಗೆ ಖಾತಾ ಉತಾರಗಳನ್ನು ಮಾಡಿಕೊಟ್ಟು ಇಂತಹ ಬಡ ಕುಟುಂಬಗಳಿಗೆ ಅನುಕೂಲ ಮಾಡಿಕೊಡುವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿ?ವೃದ್ಧಿ ಕಾರ್ಯಗಳು ಕುಂಠಿಗೊಂಡಿವೆ. ಇದರಿಂದ ನಮಗೂ ಸಹ ಅಡಚಣೆಯಾಗಿದೆ. ಕಳೆದ ಎರಡು ವರ್ಷಗಳಿಂದ ಯಾವ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಹೊಸ ಹೊಸ ಯೋಜನೆಗಳು ಸಾಕಾರಗೊಳ್ಳುತ್ತಿಲ್ಲ. ಮುಂದಿನ ತಿಂಗಳು ನಡೆಯಲಿರುವ ಬಜೆಟ್ ಅಧಿವೇಶನದಲ್ಲಿ ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ನೀಡುವಂತೆ ಮುಖ್ಯಮಂತ್ರಿಗಳನ್ನು ಕೋರಲಾಗುವುದು. ಹದಗೆಟ್ಟಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡುವಂತೆಯೂ ಇದಕ್ಕಾಗಿ ಅನುದಾನವನ್ನು ನೀಡುವಂತೆಯೂ ಸಚಿವ ಸತೀಶ್ ಜಾರಕಿಹೊಳಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದು ಅವರು ಹೇಳಿದರು.



ಬಹು ನಿರೀಕ್ಷಿತ ಮೂಡಲಗಿ ಮಿನಿ ವಿಧಾನ ಸೌಧ ನಿರ್ಮಾಣಕ್ಕೆ ನಿವೇಶನವನ್ನು ಗುರುತಿಸಲಾಗಿದೆ. ಆದರೆ ಸರ್ಕಾರದಿಂದ ಅನುದಾನದ ಕೊರತೆಯಿಂದ ವಿಳಂಬವಾಗುತ್ತಿದೆ. 8.60 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣಕ್ಕೆ ಎಲ್ಲ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಮುಂದಿನ ಏಪ್ರಿಲ್ ತಿಂಗಳಲ್ಲಿ ಈ ಕಾಮಗಾರಿಗೆ ಗುದ್ದಲಿ ಪೂಜೆ ನಡೆಸುವ ಇರಾದೆ ಇದೆ. ಈ ವರ್ಷಾಂತ್ಯದಲ್ಲಿ ಹದಗೆಟ್ಟಿರುವ ಎಲ್ಲ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಮೂಡಲಗಿ ಪಟ್ಟಣದ ವ್ಯಾಪ್ತಿಯ ಸಾರ್ವಜನಿಕರಿಗೆ ಇನ್ನು ಮುಂದೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. ಇದಕ್ಕಾಗಿ ಅರಭಾವಿ, ಕಲ್ಲೋಳಿ, ನಾಗನೂರು ಮತ್ತು ಮೂಡಲಗಿ ಸೇರಿ ಒಟ್ಟು 140.69 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ಕ್ಷೇತ್ರದ ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ದೊರೆಯಲಿದೆ. ಪ್ರತಿ ಮನೆ – ಮನೆಗೆ ನೀರು ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

**ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಗೆ ಯಾವ ಅನುದಾನವನ್ನು ಕೊಡುತ್ತಿಲ್ಲ. ಇದರಿಂದ ಹೇಳಿಕೊಳ್ಳುವಂತಹ ಪ್ರಗತಿಪರ ಕಾರ್ಯಗಳು ನಡೆಯುತ್ತಿಲ್ಲ. ಇದರ ಮಧ್ಯೆ ಇ – ಖಾತಾ ಅಭಿಯಾನವನ್ನು ಜಾರಿಗೆ ತರುವ ಮೂಲಕ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಒಳ್ಳೇ ಕೆಲಸವನ್ನು ಮಾಡಿದ್ದಾರೆ. ಇದರಿಂದ ಬಡ ಕುಟುಂಬಗಳಿಗೆ ಈ ಯೋಜನೆಯಿಂದ ಅನುಕೂಲವಾಗಲಿದೆ. ಉತ್ತಮವಾದ ಇ ಖಾತಾ ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿಗಳಿಗೆ ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುತ್ತೇನೆ.**

**। ಬಾಲಚಂದ್ರ ಜಾರಕಿಹೊಳಿ**
**ಶಾಸಕ ಮತ್ತು ಬೇಮುಲ್ ಅಧ್ಯಕ್ಷ.**

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಇದೇ ಸಂದರ್ಭದಲ್ಲಿ ವಿದ್ಯುಕ್ತವಾಗಿ ಎರಡು ಕುಟುಂಬದವರಿಗೆ ಇ – ಖಾತಾ ಉತಾರಗಳನ್ನು ನೀಡುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ವೇದಿಕೆಯಲ್ಲಿ ಪುರಸಭೆ ಅಧ್ಯಕ್ಷೆ ಖುರ್ಷಾದ ನದಾಫ, ಉಪಾಧ್ಯಕ್ಷೆ ಭೀಮವ್ವ ಪೂಜೇರಿ, ಪುರಸಭೆ ಸದಸ್ಯರಾದ ಸಂತೋಷ ಸೋನವಾಲ್ಕರ, ರವಿ ಸಣ್ಣಕ್ಕಿ, ಹಣಮಂತ ಗುಡ್ಲಮಣಿ, ಜಯಾನಂದ ಪಾಟೀಲ, ಸುಭಾಸ್ ಸಣ್ಣಕ್ಕಿ, ಅಬ್ದುಲ್ ಡಾಂಗೆ, ಆನಂದ ಟಪಾಲ್, ಈರಪ್ಪ ಮುನ್ಯಾಳ, ಹುಸೇನ್ ಶೇಖ, ಅದಮ ತಾಂಬೋಳಿ, ಶಿವು ಸಣ್ಣಕ್ಕಿ, ನಾಮ ನಿರ್ದೇಶಿತ ಸದಸ್ಯರು, ಮುಖ್ಯಾಧಿಕಾರಿ ತುಕಾರಾಂ ಮಾದರ, ಹಲವು ಗಣ್ಯರು, ಉಪಸ್ಥಿತರಿದ್ದರು.

# ಮಕ್ಕಳ ಸಂತೆ ಕಾರ್ಯಕ್ರಮದಿಂದ ಮಕ್ಕಳಲ್ಲಿ ವ್ಯವಹಾರ ಜ್ಞಾನ ವೃದ್ಧಿ: ಚಿದಾನಂದ ಸವದಿ

**ಅಥಣಿ :** ಶಾಲೆಯಲ್ಲಿ ಮಕ್ಕಳ ವ್ಯವಹಾರ ಜ್ಞಾನ ವೃದ್ಧಿಸಲು ಹಾಗೂ ವ್ಯಾಪಾರಿ ಮತ್ತು ಗ್ರಾಹಕರ ನಡುವಿನ ಸಂಬಂಧಗಳ ಅರಿವು ಮೂಡಿಸುವ ಸಲುವಾಗಿ ಇಂತಹ ಮಕ್ಕಳ ಸಂತೆ ಕಾರ್ಯಕ್ರಮಗಳ ಅವಶ್ಯವಾಗಿದೆ ಅಲ್ಲದೆ ಮಕ್ಕಳ ಸ್ವಾಭಿಮಾನಿ ಜೀವನದ ಭಾವನೆಯನ್ನು ಗಟ್ಟಿಗೊಳಿಸುತ್ತದೆ ಎಂದು ಯುವ ನಾಯಕ ಚಿದಾನಂದ ಸವದಿ ಹೇಳಿದರು.



ಅವರು ಪಟ್ಟಣದ ರಾಯಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳ ಸಂತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳ ಸಂತೆ ವಿದ್ಯಾರ್ಥಿಗಳಲ್ಲಿ ವ್ಯವಹಾರ ಜ್ಞಾನವನ್ನು ಬಿತ್ತುವ ಗುರಿಯನ್ನು ಹೊಂದಿದೆ, ಇಂತಹ ಮಕ್ಕಳ ಸಂತೆ, ಮೇಳಗಳು ಅವರಲ್ಲಿ ವ್ಯವಹಾರ ಜ್ಞಾನವನ್ನು ವೃದ್ಧಿಸುವದರ ಜೊತೆಗೆ ಅಳತೆ ಮತ್ತು ಪ್ರಮಾಣಗಳ ಅರಿವು,ಹೂಡಿಕೆ ಲಾಭ ನಷ್ಟಗಳ ಲೆಕ್ಕಾಚಾರ,ಸಂವಹನ ಕೌಶಲವೃದ್ದಿ ಜೊತೆಗೆ ತಾವು ಮಾರುವ ವಸ್ತುಗಳ ಬೆಲೆ ನಿರ್ಧಾರಗಳನ್ನು ಕೈಗೊಳ್ಳುವ ಗುಣಗಳನ್ನು ಬೆಳೆಸುತ್ತದೆ

ವಿದ್ಯಾರ್ಥಿಗಳಲ್ಲಿ ಇಂತಹ ಸಂತೆಗಳನ್ನು ಆಯೋಜನೆ ಮಾಡುವದರಿಂದ ವ್ಯವಹಾರದ ಗಣಿತದ ಮೂಲ ಕ್ರಿಯೆಗಳ ಬಳಕೆ, ನಿತ್ಯ ಜೀವನದಲ್ಲಿ ಗಣಿತ ಅಳವಡಿಕೆ, ಪ್ಲಾಸ್ಟೀಕ್ ಮುಕ್ತ ಸಂತೆಗಳ ನಿರ್ವಹಣೆಯ ಬಗ್ಗೆ ಅರಿವು ಮೂಡುತ್ತದೆ ಎಂದರು. ಸಂಸ್ಥೆಯ ಅಧ್ಯಕ್ಷ ಆರ್. ಎಂ ಡಾಂಗೆ ಮಾತನಾಡಿ, ಇಂದಿನ ಆದುನಿಕ ಯುಗದಲ್ಲಿ ಶಿಕ್ಷಣದ ಜೋತೆಗೆ ಮಕ್ಕಳಿಗೆ ವ್ಯವಹಾರದ ಜ್ಞಾನವು ಕೂಡ ಸಿಗಬೇಕು ಎಂದು ತಿಳಿದು ಇಂತಹ ಸಂತೆ ಕಾರ್ಯವನ್ನು ಆಯೋಜಿಸಲಾಗಿದೆ. ಇದರಿಂದ ಮುಂದೆ ಅವರ ಜೀವನದಲ್ಲಿ ವ್ಯವಹಾರವನ್ನು ಹೇಗೆ ಮಾಡಿಕೊಂಡು ನಡೆಯಬೇಕು ಅನ್ನುವುದು ಅವರಿಗೆ ತಿಳಿಯುತ್ತದೆ ಎಂದು ಹೇಳಿದರು.

ಶಾಲಾ ಆವರಣದಲ್ಲಿ ಮಕ್ಕಳಿಂದ ಕೂಡಿದ ಸಂತೆಯಲ್ಲಿ, ಕಾಯಿಪಲ್ಲೆ, ತರಕಾರಿ, ಹಣ್ಣು, ತಂಪು ಪಾನೀಯಗಳು, ಕಿರಾಣಿ ವಿವಿಧ ವಸ್ತುಗಳ ಅಂಗಡಿಗಳನ್ನು ಮತ್ತು ಮಳಿಗೆಗಳನ್ನು ತೆರೆದು ಮುಕ್ತ ವ್ಯಾಪಾರ ನಡೆಸಿದರು. ಪಾಲಕರು ಹಾಗೂ ಮುಖಂಡ ಚಿದಾನಂದ ಸವದಿ ಅವರು ಮಕ್ಕಳೊಂದಿಗೆ ಪ್ರತಿ ಸ್ಟಾಲ್‌ಗೆ ಹೋಗಿ ಅಲ್ಲಿನ ವಸ್ತುಗಳನ್ನ ಹಾಗೂ ಆಹಾರಗಳನ್ನ ಖುದ್ದು ಪರೀಕ್ಷಿಸಿ ಮಕ್ಕಳಿಗೆ ಸೂಕ್ತ ಸಲಹೆ ಹಾಗೂ ಮಾಹಿತಿಗಳನ್ನು ಪಡೆದು ಮಕ್ಕಳ ಕೌಶಲ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು

ಈ ವೇಳೆ ಸಂಸ್ಥೆಯ ಉಪಾಧ್ಯಕ್ಷ ಟಿ. ಆರ್ ಡಾಂಗೆ, ಆಡಳಿತ ಮಂಡಳಿ ಸದಸ್ಯರಾದ ರೀಹಾನ್ ಡಾಂಗೆ, ಆಡಳಿತಾಧಿಕಾರಿ ಎ. ಹೆಚ್ ಮುಲ್ಲಾ, ಮುಖ್ಯ ಶಿಕ್ಷಕರಾದ ಸುರೇಶ ಬುರ್ಲಿ, ಶ್ರೀಮತಿ ಆಸೀಯಾ ಪಟೆಲ್, ಶಿಕ್ಷರಾದ ಅಜೀತ ದೇವಕರ, ಪರಶುರಾಮ ನಾಟೇಕರ, ಶಿವಾನಂದ ಚೌಗಲಾ, ಅಪ್ತಾಬ್ ಗೋರೆಖಾನ, ಲಕ್ಷ್ಮೀ ಸಂಕ, ಸುಮೀತ್ರಾ ಸೋಳಸಿ, ಶಿಲ್ಪಾ ಯಲ್ಲಟ್ಟಿ, ತೇಜಸ್ವಿನಿ ಬೆಳ್ಳಂಕಿ ಸೇರಿದಂತೆ ಪಾಲಕರು, ಶಾಲೆ ಸಿಬ್ಬಂದಿ ಹಾಗೂ ಗಣ್ಯರು ಮಕ್ಕಳ ಸಂತೆಯಲ್ಲಿ ಭಾಗಿಯಾಗಿದ್ದರು.

# 19.85 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಸಚಿವ ಸತೀಶ ಜಾರಕಿಹೊಳಿ

**ಬೆಳಗಾವಿ :** ಬಾಕ್ಸೈಟ್ ರೋಡ್ ನಲ್ಲಿ ಹುನಮಾನ ನಗರ ಸರ್ಕಲ್‌ದಿಂದ ರಾಷ್ಟೀಯ ಹೆದ್ದಾರಿವರೆಗೂ 19.85 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಿಕಿಹೊಳಿ ಅವರು ಚಾಲನೆ ನೀಡಿದರು.

ಈ ವೇಳೆ ಸಚಿವ ಸತೀಶ ಜಾರಕಿಹೊಳಿ ಅವರು ಮಾತನಾಡಿ, ನಗರದಲ್ಲಿ ಬಹಳಷ್ಟು ರಸ್ತೆ ದುರಸ್ತಿ ಕಾಮಗಾರಿಗಳು ನಡೆಯಬೇಕಿದೆ. ಬಾಕ್ಸೈಟ್ ರೋಡ್ 4 ಕಿಲೋ ಮೀಟರ್ ವ್ಯಾಪ್ತಿಯ ಅಭಿವೃದ್ಧಿ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಬೆಳಗಾವಿ ಸೇರಿದಂತೆ ಎಲ್ಲಾ ಕ್ಷೇತ್ರದ ಕಾಮಗಾರಿಗೆ ವೇಗ ನೀಡಲಾಗುವುದು ಎಂದರು.

ಉತ್ತರ ಕ್ಷೇತ್ರದಲ್ಲಿ ಈಗಾಗಲೇ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಮುಂಬರುವ ದಿನಗಳಲ್ಲಿ ಎಲ್ಲಾ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಈ ಕ್ಷೇತ್ರದ ಶಾಸಕರು ಕ್ಷೇತ್ರದ ಅಭಿವೃದ್ಧಿಗಾಗಿ ಸತತ ಪ್ರಯತ್ನ ಮಾಡುತ್ತಿದ್ದಾರೆ. ಅವರ ಪ್ರಯತ್ನದಿಂದ ಬಹುಮತದ 19. 85 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಇನ್ನೂ ಹೆಚ್ಚಿನ ಕೆಲಸಗಳು ನಡೆಯಲಿವೆ. ಬೆಳಗಾವಿ ನಗರವನ್ನು ಬೆಳೆಸೋಣ ಅದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.



ರಾಜ್ಯಾದ್ಯಂತ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಜೊತೆ ಕ್ಷೇತ್ರದ ವ್ಯಾಪ್ತಿಯ ಕಾಮಗಾರಿ ಬಹು ವೇಗ ನೀಡಲಾಗಿದೆ. ಶಾಸಕರ ಮನವಿಯಂತೆ ಜನರ ಕನಸಿನ ರಸ್ತೆ ಶೀಘ್ರದಲ್ಲೇ ಮುಗಿಯಲಿದೆ.

ಸಿಎಂ ಸಿದ್ದರಾಮಯ್ಯನವರ ಸರ್ಕಾರದ ಆಡಳಿತ ಅವಧಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಶಾಸಕ ರಾಜು(ಆಸೀಫ) ಸೇಠ ಮಾತನಾಡಿ, ಕ್ಷೇತ್ರದ ಜನತೆ ಬೇಡಿಕೆ ಈಡೇರಿದೆ ರಸ್ತೆಯ ಕಾಮಗಾರಿಗೆ ದುರಸ್ತಿ ಕಾರ್ಯಾರಂಭಕ್ಕೆ ಚಾಲನೆ ನೀಡಲಾಗಿದೆ.

ನಮ್ಮ , ನಿಮ್ಮೆಲ್ಲರ ಪ್ರಯತ್ನಕ್ಕೆ ಸಚಿವರು ಅನುದಾನ ಬಿಡುಗಡೆ ಮಾಡಿ ಕ್ಷೇತ್ರದ ಅಭಿವೃದ್ಧಿಗೆ ಸ್ಪಂಧಿಸಿದ್ದಾರೆ. ನಾಡಿನ ಅಭಿವೃದ್ಧಿ ಅವರ ಗುರಿಯಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಯ ಕಾರ್ಯಗಳು ನಿರಂತರವಾಗಿ ನಡೆಯಲಿದೆ ಎಂದ ಅವರು, ಕ್ಷೇತ್ರದ ಪ್ರಗತಿಗಾಗಿ ಹೆಚ್ಚಿನ ಅನುದಾನ ತರುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಬಾಕಿ ಉಳಿದ ಕಾಮಗಾರಿಗೆ ಶೀಘ್ರವೆ ಚಾಲನೆ ನೀಡಲಾಗುವುದು.

ಸಚಿವ ಸತೀಶ ಜಾರಕಿಹೊಳಿ ಅವರ ಅಮೃತಹಸ್ತದಿಂದ ವಿವಿಧ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದಾರೆ. ಕ್ಷೇತ್ರದ ಜನರಿಗೆ ಸುಸಜ್ಜಿತ ರಸ್ತೆ ನಿರ್ಮಾಣವೇ ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಎಸ್ ಎಸ್ ಸೊಬರದ, ಲೋಕೋಪಯೋಗಿ ಇಲಾಖೆ ಎಇಇ ಶಶಿಕಾಂತ್ ಕೋಲೆಕಾರ್ , ರಾಜೇಂದ್ರ, ಮೈದುದಿನ್ ಮುಲ್ಲಾ, ತರ್ಡೆ ಬ್ರದರ್ಸ್ ರಾಯಬಾಗ ಹಾಗೂ ಇತರರು ಇದ್ದರು.

# ವಿದ್ಯಾಭ್ಯಾಸದಲ್ಲಿ ಅಂಗವಿಕಲರಿಗೆ ಶೇ.5 ರಷ್ಟು ಸ್ಥಾನಗಳ ಮೀಸಲು: ದಾಸ್ ಸೂರ್ಯವಂಶಿ



**ಕೊಪ್ಪಳ :** ಎಲ್.ಕೆ.ಜಿ ಯಿಂದ ಪಿ.ಜಿ ವರೆಗಿನ ವಿದ್ಯಾಭ್ಯಾಸದಲ್ಲಿ ಅಂಗವಿಕಲರಿಗೆ ಶೇ.5 ರಷ್ಟು ಸ್ಥಾನಗಳು ಮೀಸಲಿರಿಸಲಾಗಿದೆ ಎಂದು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರಾದ ದಾಸ್ ಸೂರ್ಯವಂಶಿ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಅನುಷ್ಠಾನಗೊಳಿಸುವ ಕುರಿತು ಕರೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ರಾಷ್ಟ್ರದಲ್ಲಿನ ವಿಕಲಚೇತನ ವ್ಯಕ್ತಿಗಳಿಗೆ ಅಗತ್ಯವಿರುವ ಆರೋಗ್ಯ, ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ ಹಾಗೂ ಸಾಮಾಜಿಕ ಭದ್ರತೆಗಳಂತಹ ಪುನರ್ವಸತಿ ಸೇವೆಗಳನ್ನು ಕಲ್ಪಿಸುವುದರ ಮೂಲಕ ಅವರಿಗೆ ಸಮಾನ ಅವಕಾಶ ಕಲ್ಪಿಸಿ ಅವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016ನ್ನು ಜಾರಿಗೆ ತಂದಿದ್ದು, ಈ ಅಧಿನಿಯಮವನ್ನು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು "ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ನಿಯಮಗಳು–2019"ನ್ನು ರೂಪಿಸಿದೆ. ವಿಕಲಚೇತನ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದರ ಮೂಲಕ ಅವರ ಹಕ್ಕುಗಳನ್ನು ಸಂರಕ್ಷಿಸಲು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳಅಧಿನಿಯಮ2016ರಅನುಷ್ಠಾನಕ್ಕಾಗಿ ರಾಜ್ಯ ಆಯುಕ್ತರ ಕಛೇರಿಯನ್ನು ಸ್ಥಾಪಿಸಿದ್ದು, ಈ ಕಛೇರಿಗೆ ಆಯುಕ್ತರನ್ನು ನೇಮಕ ಮಾಡಿದೆ. ಅಲ್ಲದೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಸೆಕ್ಷನ್ 80ರ ಪ್ರಕಾರ ಆಯುಕ್ತರಿಗೆ ಕೆಲ ಅಧಿಕಾರಗಳನ್ನು ಪ್ರತ್ಯಯೋಜಿಸಲಾಗಿದ್ದು, ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು ಈ ಅಧಿನಿಯಮವನ್ನು ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಇಲಾಖಾವಾರು ಜಿಲ್ಲಾ ಅಂಗವಿಕಲರ ಪ್ರಗತಿ ಪರಿಶೀಲನೆನಡೆಸಲಾಗುತ್ತಿದೆ.ಶಿಕ್ಷಣಮೀಸಲಾತಿ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಅಂಗವಿಕಲರಿಗಾಗಿಯೇ ಇರುವ ಶೇ. 4 ಮತ್ತು 5ರ ಮೀಸಲಾತಿ ಇದ್ದು, ಅದರ ಪರಿಶೀಲನೆಗಾಗಿ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಎಲ್ಲಾ ಸಾರ್ವಜನಿಕ ಸ್ಥಳಗಳು ವಿಕಲಚೇತನ ಸ್ನೇಹಿಯಾಗಿರಬೇಕು. ಆ ಸ್ಥಳಗಳಲ್ಲಿ ಅಂಗವಿಕಲರ ಓಡಾಟಕ್ಕೆ ಸುಲಭ ದಾರಿ, ವೀಲ್ ಚೇರ್ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯವಾದ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಳಿರಬೇಕು. ಈ ಹಿನ್ನೆಲೆಯಲ್ಲಿ ಭಾರತ ರಾಷ್ಟ್ರದಲ್ಲಿ 'ಸುಗಮ್ ಯಾತ್ರಾ' ಕಾರ್ಯಕ್ರಮ ಜಾರಿಯಾಗಿದೆ. ಈ ಕಾರ್ಯಕ್ರಮದ ಜಾಗೃತಿ ಮೂಡಿಸಲು ಹಳ್ಳಿ–ಹಳ್ಳಿಗಳಲ್ಲಿ ಶಿಬಿರಗಳನ್ನು ಹಮ್ಮಿಕೊಳ್ಳಾಗುತ್ತಿದೆ. ಇದಕ್ಕಾಗಿ ಒಂದು ಆ್ಯಪ್ ಸಿದ್ದಪಡಿಸಲಾಗಿದ್ದು, ಆ್ಯಪ್ ನಲ್ಲಿ ಅಲ್ಲಿನ ವ್ಯವಸ್ಥೆಯ ಬಗ್ಗೆ ವಿಕಲಚೇತನರಿಗೆ ಸಂಪೂರ್ಣ ಮಾಹಿತಿ ಸಿಗಲಿದೆ. ಅಂಗವಿಕಲರಿಗೆ ಇರುವ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು "ಅಂಗವಿಕಲರಿಂದ ಅಂಗವಿಕಲರ ಅಭಿವೃದ್ಧಿ" ಎಂಬಂತೆ ಗ್ರಾಮ ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಕರ್ನಾಟಕದಲ್ಲಿ ಸುಮಾರು 7 ಸಾವಿರ ಅಂಗವಿಕಲರ ಪುನರವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿರುವುದು ದೇಶದಲ್ಲಿಯೇ ನಮ್ಮ ರಾಜ್ಯ ಮಾದರಿಯಾಗಿದೆ ಎಂದರು.

ಅದಲ್ಲದೇ ಭಾರತ ದೇಶದಲ್ಲಿ ಮೊಟ್ಟಮೊದಲ ಬಾರಿಗೆಕರ್ನಾಟಕದಲ್ಲಿವಿಶೇಷಚೇತನರ'ಆರೈಕೆ ದಾರರ ರಕ್ಷಣೆ' ಎಂಬ ಕಾರ್ಯಕ್ರಮವನ್ನು ಎಪ್ರಿಲ್‌ಮಾಹಿಯಿಂದಜಾರಿಗೆತರಲಾಗುತ್ತಿದ್ದು, ಇದರ ಉದ್ದೇಶ ಅಂಗವಿಕಲರ ಪೋಷಕರಿಗೆ ಪ್ರೋತ್ಸಾಹಿಸುವುದಾಗಿದೆ. ರಾಜ್ಯ ಸರ್ಕಾರದಿಂದ ನಡೆಸುವಂತಹ ಸುಮಾರು 900 ವಸತಿ ಶಾಲೆಗಳಲ್ಲಿ 25 ಪ್ರತಿಶತ ಅಂಗವಿಕಲತೆ ಹೊಂದಿದ ಮಕ್ಕಳಿಗೆ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೇ 12ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲು ಅವಕಾಶವಿದೆ. ರಾಷ್ಟ್ರೀಯ ಅಂಗವಿಕಲರ ಅಭಿವೃದ್ಧಿ ಹಣಕಾಸು ಸಂಸ್ಥೆಯ ಮೂಲಕ ಪ್ರತಿ ವರ್ಷ ರಾಜ್ಯಕ್ಕೆ ರೂ. 100 ಕೋಟಿ ತರಬಹುದಾಗಿದ್ದು, ಅಂಗವಿಕಲರಿಗೆ 50 ಲಕ್ಷದವರೆಗೆ ಸಾಲ ಸೌಲಭ್ಯ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ, ವಿಕಲಚೇತನರ ಪ್ರತಿನಿಧಿ ಬಿ.ಹಂಪಣ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಸುರಕ್ಷಿತ ಅಂತರ್ಜಾಲ ದಿನಾಚರಣೆ: ಜಾಗೃತಿ ಕಾರ್ಯಾಗಾರ

## ಹಿತ, ಮಿತ, ಸುರಕ್ಷಿತವಾಗಿ ಇಂಟರ್ನೆಟ್ ಬಳಸಿ: ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ



**ಕೊಪ್ಪಳ :** ಇತ್ತೀಚೆಗೆ ಸೈಬರ್ ಕ್ರೈಮ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಎಲ್ಲರೂ ಹಿತ ಮಿತ ಹಾಗೂ ಸುರಕ್ಷಿತವಾಗಿ ಅಂತರಜಾಲ ಬಳಕೆ ಮಾಡುವಂತೆ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು. ಅವರು ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಜಿಲ್ಲಾಡಳಿತದಿಂದ "ಸುರಕ್ಷಿತ ಅಂತರ್ಜಾಲ ದಿನಾಚರಣೆ" ಅಂಗವಾಗಿ ಆಯೋಜಿಸಿದ್ದ ಅಂತರ್ಜಾಲ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಮನುಷ್ಯನಿಗೆ ಮೊಬೈಲ್ ಸಹ ಜೀವನದ ಒಂದು ಅವಿಭಾಜ್ಯ ಅಂಗವಾದಂತಾಗಿದೆ. ಮುಬೈಲ್, ಇಂಟರ್ನೆಟ್‌ನಿಂದ ನಮಗೆ ಬಹಳಷ್ಟು ಲಾಭ–ನಷ್ಟಗಳಿವೆ. ಆದರೆ, ಅವುಗಳನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳುತ್ತೇವೆ ಎಂಬುವುದು ಮುಖ್ಯ. ನಾವುಗಳು ಎಷ್ಟೇ ಜಾಣರಿದ್ದರು ಸಹ ಕೆಲವೊಮ್ಮೆ ಹ್ಯಾಕರ್ಸ್ ಅಥವಾ ಸೈಬರ್ ಕ್ರೈಮ್ ಪ್ರಕರಣಗಳಿಗೆ ಬಲಿಯಾಗಿ, ತೊಂದರೆಗೆ ಒಳಗಾಗಬಹುದು. ಇದಕ್ಕಾಗಿ ಪ್ರತಿಯೊಬ್ಬರೂ ಸೈಬರ್ ಅಪರಾಧಗಳ ಕುರಿತು ಜಾಗೃತರಾಗಿರಬೇಕು. ಈ ಹಿನ್ನೆಲೆಯಲ್ಲಿ ವಿಶ್ವ ಸುರಕ್ಷಿತ ಅಂತರ್ಜಾಲ ದಿನವನ್ನು ಆಚರಿಸಲಾಗುತ್ತಿದ್ದು, 'ಜೊತೆಯಾಗಿ ಉತ್ತಮ ಇಂಟರ್ನೆಟ್‌ಕಡೆಗೆ'ಎಂಬಈವರ್ಷದಘೋಷ ವಾಕ್ಯದೊಂದಿಗೆ ಅರಿವು ಮೂಡಿಸಲಾಗುತ್ತಿದೆ. ಎಲ್ಲರೂ ಸುರಕ್ಷತೆಯಿಂದ ಇಂಟರ್ನೆಟ್ ಬಳಕೆ ಮಾಡಬೇಕೆಂದರು.

ಸೈಬರ್ ಸೆಲ್‌ನ ಸಿಪಿಐ ಮಹಾಂತೇಶ ಸಜ್ಜನ ಅವರು ಮಾತನಾಡಿ, ಸೈಬರ್ ಕ್ರೈಮ್‌ಗೆ ಯಾರಾದರೂಒಳಗಾಗಬಹುದು.ಮನುಷ್ಯನಿಗೆ ಅತಿ ಆಸೆ ಮತ್ತು ಭಯದಿಂದ ಸೈಬರ್ ಕ್ರೈಮ್ ಪ್ರಾರಂಭವಾಗುತ್ತದೆ. ಉದಾಹರಣೆಗೆ ನಿವು ಲೆಕ್ಕಿಡ್ರಾನಲ್ಲಿ ಹಣ ಗೆದ್ದಿದ್ದೀರಿ, ನಿಮ್ಮ ಮೊಬೈಲ್ ಸಂಖ್ಯೆಗೆ ಆಫರ್ ಬಂದಿದೆ ಎಂದು ಹೀಗೆ ವಿವಿಧ ಆಸೆಗಳನ್ನು ತೊರಿಸಿ ಮತ್ತು ನಿಮ್ಮ ಎಟಿಎಂ ಕಾರ್ಡ್ ಅವಧಿ ಮುಕ್ತಾಯಗೊಂಡಿದೆ, ಬ್ಲಾಕ್ ಆಗಿದೆ, ಹೀಗೆ ವಿವಿಧ ಬಗೆಗಳಲ್ಲಿ ಭಯ ಹುಟ್ಟಿಸಿ, ವಂಚಿಸಬಹುದು. ಹಿಂದೆ ಕಿಪ್ಯಾಡ್ ಮೊಬೈಲ್ ಬಳಕೆ ಇತ್ತು. ಆಗ ಇಂತಹ ವಂಚನೆ ಪ್ರಕರಣಗಳು ಆಗುತ್ತಿರಲಿಲ್ಲ. ಈಗ ಸ್ಮಾರ್ಟ್ ಫೋನ್ ಬಳಕೆ ಸಾಮಾನ್ಯವಿದ್ದು, ಇಂಟರ್ನೆಟ್ ಮೂಲಕ ನಮ್ಮ ಮೊಬೈಲ್ ಡಾಟಾ ಇತರರಿಗೆ ಸುಲಭವಾಗಿ ಸಿಗುತ್ತದೆ. ಆದ್ದರಿಂದ ಇಂಟರ್ನೆಟ್ ಬಳಕೆದಾರರು ಅತ್ಯಂತ ಜಾಗೃತೆಯಿಂದಿರಬೇಕು. ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ ಎಂಬಂತೆ ಮುಂದೊಂದು ದಿನ 'ಮೊಬೈಲ್ ಕಡಿಮೆ ಬಳಕೆ ಮಾಡುವವನಿಗೆ ಯಾವುದೇ ಕ್ರೈಮ್ ಸಮಸ್ಯೆಯಿಲ್ಲ' ಎಂಬ ಮಾತು ಬರಬಹುದು ಎಂದರು.

ಮೊಬೈಲ್‌ಕರೆಗಳಮೂಲಕಸೂಕ್ಷ್ಮವಿವರಗಳಾದ ಓಟಿಪಿ, ಆಧಾರ್, ಪ್ಯಾನ್ ಅಥವಾ ಬ್ಯಾಂಕ್ ರುಜುವಾತುಗಳನ್ನು ಎಂದಿಗೂ ಬಹಿರಂಗಪಡಿಸಬಾರದು. ಅನಧಿಕೃತ ಆಧಾರ್ ಪಾವತಿ ಅಧಿಸೂಚನೆಗಳ ಬಗ್ಗೆ ಜಾಗರೂಕರಾಗಿರಿ. ಪ್ಯಾನ್, ಆಧಾರ್ ಅಥವಾ ಬ್ಯಾಂಕ್‌ವಿವರಗಳಂತಹಸೂಕ್ಷ್ಮಮಾಹಿತಿಯನ್ನು ಕೇಳುವ ಅಪರಿಚಿತ ದೂರವಾಣಿ ಸಂಖ್ಯೆಗಳಿಂದ ಹಾಗೂ ವಿಶೇಷವಾಗಿ ಕೆವೈಸಿ ನವೀಕರಣಗಳ ನೆಪದಲ್ಲಿ ಬರುವ ಲಿಂಕ್‌ಗಳ ಮೇಲೆ ಎಂದಿಗೂ ಕ್ಲಿಕ್ ಮಾಡಬೇಡಿ. ವೈಯಕ್ತಿಕ ಮಾಹಿತಿ ಅಥವಾ ಹಣಕ್ಕಾಗಿ ವಿನಂತಿಸುವ ಅಪರಿಚಿತ ದೂರವಾಣಿ ಸಂಖ್ಯೆಗಳಿಂದ ಬರುವ ಕರೆಗಳಿಗೆ ಎಂದಿಗೂ ಪ್ರತಿಕ್ರಿಯಿಸಬಾರದು. ಸೈಬರ್ ಅಪರಾಧಕ್ಕೆ ಒಳಗಾಗಿದ್ದರೆ, ತಕ್ಷಣ 24*7 ಸಹಾಯವಾಣಿ ಸಂಖ್ಯೆ 1930 ಗೆ ಕರೆ ಮಾಡಬಹುದು ಎಂದು ವಿವರವಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರದ(ಎನ್.ಐ.ಸಿ) ಡಿ.ಐ.ಓ ಬಸವರಾಜ ವಾಳದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ದಿನನಿತ್ಯದ ಜೀವನದಲ್ಲಿ ಅಂತರ್ಜಾಲ ಬಳಕೆ, ಅಂತರ್ಜಾಲ ಸುರಕ್ಷಿತ ಬಳಕೆ (ಅಂತರ್ಜಾಲ ಸುರಕ್ಷತೆ), ಸಾಮಾನ್ಯ ಸೈಬರ್ ಬೆದರಿಕೆಗಳು, ಸೈಬರ್ ನೈರ್ಮಲ್ಯ ಅಭ್ಯಾಸಗಳು, ಸೈಬರ್ ಅಪರಾಧಗಳನ್ನು ವರದಿ ಮಾಡುವ ಕಾರ್ಯವಿಧಾನ (1930), ಆನಲೈನ್ನಲ್ಲಿ ಸುರಕ್ಷಿತವಾಗಿರಲು ಜಾಗೃತಿ ಸಂಪನ್ಮೂಲಗಳ ಕುರಿತು ಮಾಹಿತಿ ನೀಡಲಾಯಿತು.

# ಕೊಪ್ಪಳ ಬಂದ್ ಗೆ ಬೆಂಬಲಿಸಿ ಇನ್ನರ್ ವೀಲ್ ಕ್ಲಬ್ ಪ್ರತಿಭಟನೆ

**ಕೊಪ್ಪಳ :** ನಗರಕ್ಕೆ ಸಮೀಪ ಎಂ ಎಸ್ ಪಿ ಎಲ್ ಬಲದೋಟ ದಿಂದ ನಿರ್ಮಾಣವಾಗುತ್ತಿರುವ ಬೃಹತ್ ಉಕ್ಕಿನ ಕಾರ್ಖಾನೆ ಇಂದ ನಗರದಲ್ಲಿ ವಾಸಿಸುವ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುತ್ತದೆ ಆರೋಗ್ಯ ಮತ್ತು ಪರಿಸರದ ಮೇಲೆ ಉಂಟಾಗಬಹುದಾದ ಭವಿಷ್ಯದ ಪರಿಣಾಮಗಳ ಬಗ್ಗೆ ಆಲೋಚಿಸಿ ಸದರಿ ಕಾರ್ಖಾನೆ ನಿರ್ಮಾಣ ಸ್ಥಗಿತಗೊಳಿಸಬೇಕು, ಇದರಿಂದ ಕಲುಷಿತ ವಾತಾವರಣ ನಿರ್ಮಾಣವಾಗುತ್ತದೆ ಕೂಡಲೇ ಇದು ರದ್ದುಪಡಿಸಬೇಕೆಂದು ಒತ್ತಾಯಿಸಿ ವಿವಿಧ ಸಂಘಟನೆ ಸೋಮವಾರದಂದು ಕೊಪ್ಪಳ ಬಂದ್ ಗೆ ಕರೆ ನೀಡಿದ್ದು ಸದರಿ ಬಂದ್ ಗೆ ಬೆಂಬಲಿಸಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಅವರ ನೇತೃತ್ವದಲ್ಲಿ ಕ್ಲಬ್ಬಿನ ಪದಾಧಿಕಾರಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ಕೂಡಲೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಉಕ್ಕಿನ ಕಾರ್ಖಾನೆಗೆ ನೀಡಿರುವ ಅನುಮತಿ ರದ್ದು ಪಡಿಸಬೇಕು ಕೊಪ್ಪಳಕ್ಕೆ ಇಂತಹ ಬೃಹತ್ ಉಕ್ಕಿನ ಕಾರ್ಖಾನೆ ಬೇಡ ಇದರಿಂದ ಜನರ ಜೀವನಕ್ಕೆ

ದುಷ್ಪರಿಣಾಮ ಬೀಳುವ ಸಾಧ್ಯತೆ ಹೆಚ್ಚಾಗಿದ್ದು ಜನರ ಹಿತದೃಷ್ಟಿಯನ್ನು ಗಮನದಲ್ಲಿ ಇದ್ದುಕೊಂಡು ಕಾರ್ಖಾನೆ ಸ್ಥಾಪನೆ ರದ್ದುಪಡಿಸುವಂತೆ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಪದಾಧಿಕಾರಿಗಳು ಸೋಮವಾರದಂದು ಅಶೋಕ್ ಸರ್ಕಲ್ ಬಳಿ ಪ್ರತಿಭಟನೆ ನಡೆಸಿ ಸರಕಾರದ ಗಮನ ಸೆಳೆದರು,

ಪ್ರತಿಭಟನೆಯ ನೇತೃತ್ವ ವನ್ನು ಕೊಪ್ಪಳ ಇನ್ನರ್ವಿಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ವಹಿಸಿದ್ದರು, ಈ ಸಂದರ್ಭದಲ್ಲಿ ಕ್ಲಬ್ಬಿನ ಉಪಾಧ್ಯಕ್ಷರಾದ ಮಧು ಶೆಟ್ಟರ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಖಜಾಂಚಿ ಆಶಾ ಐಎಸ್‌ಓ ಮಧು ನಿಲೋಗಲ್ ಎಡಿಟರ್ ನಾಗವೇಣಿ ಹಿರೀಯ ಸದಸ್ಯರಾದ ಡಾ,ರಾಧಾ ಕುಲಕರ್ಣಿ ಕಾರ್ಯಕಾರಣಿ ಸಮಿತಿ ಸದಸ್ಯರು ಇತರ ಸದಸ್ಯರು ಮಹಿಳೆಯರು ಪಾಲ್ಗೊಂಡಿದ್ದರು.

# ಭಾಗ್ಯನಗರ: ಆಸ್ತಿ ಮಾಲೀಕರು ಕಟ್ಟಡ, ನಿವೇಶನಗಳಿಗೆ ಎ ಮತ್ತು ಬಿ ಖಾತೆಯನ್ನು ಪಡೆದುಕೊಳ್ಳಿ

**ಕೊಪ್ಪಳ :** ಕೊಪ್ಪಳ ತಾಲ್ಲೂಕಿನ ಭಾಗ್ಯನಗರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲೀಕರು ತಮ್ಮ ಕಟ್ಟಡಗಳು ಹಾಗೂ ನಿವೇಶನಗಳಎ–ಖಾತಾಮತ್ತುಬಿ ಖಾತೆಯನ್ನು ಪಡೆದುಕೊಳ್ಳುವಂತೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಅಂತಿಮ ಅಧಿಸೂಚನೆ ಸುತ್ತೋಲೆಯಂತೆ ಭಾಗ್ಯನಗರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಅಧಿಕೃತ ಕಟ್ಟಡ, ನಿವೇಶನಗಳಿಗೆ ಎ–ಖಾತಾ ಪಡೆದುಕೊಳ್ಳಬೇಕು ಹಾಗೂ ಅನಧಿಕೃತ ಕಟ್ಟಡ, ನಿವೇಶನಗಳಿಗೆ ಎರಡರಷ್ಟು ಆಸ್ತಿ ತೆರಿಗೆಯನ್ನು ಭರಿಸಿ, ಬಿ ಖಾತೆಯನ್ನು ಮೇ 11ರಒಳಗಾಗಿಪಡೆಯುವಂತೆಆಸ್ತಿಮಾಲೀಕರಿಗೆ ಈ ಮೂಲಕ ತಿಳಿಸಿದೆ ಎಂದು ಭಾಗ್ಯನಗರ ಪಟ್ಟಣ ಪಂಚಾಯತ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಸ್ವಾಸ್ಥ ಸಮಾಜದ ನಿರ್ಮಾಣವೇ ಕವಿಗಳ ಮೂಲ ಆಶಯವಾಗಲಿ: ಎನ್.ಎಂ. ಬಿರಾದಾರ



**ವಿಜಯಪುರ :** ಕವಿಗಳು ಸಮಾಜದ ಓರೆಕೋರೆಗಳನ್ನು ತಿದ್ದುವ ಮೂಲಕ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡುವ ಮೂಲಕ ಸಮಾಜದ ಕಣ್ಣುಗಳಾಗಿ ಕಾರ್ಯ ಮಾಡಬೇಕು ಎಂದು ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಎನ್.ಎಂ ಬಿರಾದಾರ ಅಭಿಪ್ರಾಯಪಟ್ಟರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಸೋಮವಾರ ಜರುಗಿದ 20ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು,

ರಾಜ್ಯ ರಾಷ್ಟ್ರಮಟ್ಟದ ಪ್ರಚಲಿತ ವಿಷಯಗಳನ್ನು, ತಂದೆ–ತಾಯಿಯ ಮಹತ್ವ ಸಾರುವ ದೇಶಾಭಿಮಾನ ಹೆಚ್ಚಿಸುವ ಕವಿತೆಗಳನ್ನು ವಾಚಿಸಿದ ಕವಿಗಳಿಗೆ ಅಭಿನಂದನೆ ಸಲ್ಲಿಸುತ್ತಾ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಡಾ ಮಾಧವ ಗುಡಿ ಮಾತನಾಡಿ, ಕವಿಗಳು ತಮ್ಮ ಸೃಜನಶೀಲತೆಯ ಮೂಲಕ ನಾವಿನ್ಯಯುತ ವಿಷಯಗಳನ್ನಿಟ್ಟುಕೊಂಡು ಕವನ ವಾಚನ ಮಾಡುವ ಮೂಲಕ ಕವಿಗೋಷ್ಠಿಗೆ ಮೆರುಗು ತಂದುಕೊಟ್ಟಿದ್ದಾರೆಎಂದರು.ಹೊನವಾಡದ ಬಾಬುರಾವ್ ಮಹಾರಾಜರು ಸಾನ್ನಿಧ್ಯ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸುಮಾ ಬೋಳರೆಡ್ಡಿ, ರವಿ ಕಿತ್ತೂರ, ಶಿವಾನಂದ ಡೋಣೂರ, ಕವಿತಾ ಕಲ್ಯಾಣಪ್ಪಗೋಳ, ಮಡಿವಾಳಮ್ಮ ನಾಡಗೌಡ, ಶಾಂತಲಾ ಪಾಟೀಲ ಉಪಸ್ಥಿತರಿದ್ದು ಮಾತನಾಡಿದರು.

ಇದೇ ಸಂದರ್ಭದಲ್ಲಿ ಪಾರ್ವತಿ ಸೊನ್ನದ, ಲಕ್ಷ್ಮಿ ಕಾತ್ರಾಳ, ಮಾಳು ವಾಲೀಕಾರ, ಶಿವಾಜಿ ಮೋರೆ, ಚಾಂದ್ ಬೀಬಿ ಬಿಜಾಪುರ, ಶಿವಸೇನೆಯ ಹಿರೇಮಠ, ಅಂಬರೀಷ ಪೂಜಾರಿ,

ಮುರುಗೇಶ ಸಂಗಮ, ಸೋಮಲಿಂಗಪ್ಪ ಅಂಗಡಿ, ಅಮಿರುದ್ದೀನ್ ಖಾಜಿ, ಅಂಬಿಕಾ ಕರಕಪ್ಪಗೋಳ, ಸಂಗಮೇಶ ಜಂಗಮಶೆಟ್ಟಿ, ಶಾಂತಾ ಬಿರಾದಾರ, ರೂಪಾ ರಜಪೂತ, ಶೋಭಾ ಹರಿಜನ, ಸುರೇಶ ಪೂಜಾರಿ, ಅನ್ನಪೂರ್ಣ ಚೋಳಕೆ, ಅರುಂಧತಿ ಹತ್ತಿಕಾಳ, ಪರ್ವೀನ್ ಶೇಖ, ಸಿದ್ದನಗೌಡ ಕಾಶಿನಕುಂಟಿ, ಮಲ್ಲಿಕಾರ್ಜುನ ದಳವಾಯಿ, ಹುಸೇನ್ ಮುಲ್ಲಾ ಹೀಗೆ 25 ಕವಿಗಳು ಕವಿಗೋಷ್ಠಿಯಲ್ಲಿಭಾಗವಹಿಸಿಕವನವಾಚಿಸಿ ಅಕ್ಷರ ಜಾತ್ರೆಯನ್ನು ಯಶಸ್ವಿಗೊಳಿಸಿದರು. ನಿರೂಪಣೆಯನ್ನು ಸುಮಲತಾ ಗಡಿಯಪ್ಪನವರ ನೆರವೇರಿಸಿದರು, ಸುಜಾತಾ ಹ್ಯಾಳದ ಸ್ವಾಗತಿಸಿದರು. ಜಗದೀಶ ಬಿರಾದಾರ, ಗುರುಪ್ರಸಾದ ಬಿ.ಜಿ. ನಿರ್ವಹಿಸಿದರು. ವಿಜಯಲಕ್ಷ್ಮಿ ಹಳಕಟ್ಟಿ ವಂದಿಸಿದರು.

# ಮುಗಳಖೋಡದಲ್ಲಿ ಮಹಾ ಶಿವರಾತ್ರಿ

## ।ಮಹೋತ್ಸವ, ಸಾಂಸ್ಕೃತಿಕ ಉತ್ಸವ। ವಿವಿಧ ಸ್ಪರ್ಧೆಗಳ ಆಯೋಜನೆ

**ಮುಧೋಳ :** ಸಿದ್ಧಾರೂಢರ 190 ನೇ ಜಯಂತಿ ಸದ್ಗುರು ಗುರುನಾಥಾರೂಢರ 115 ನೇ ಜಯಂತ್ಯೋತ್ಸವ, ಸಿದ್ಧಾರೂಢರ ಕಥಾಮೃತದ ಶತಮಾನೋತ್ಸವ, ಗ್ರಂಥ ಮೆರವಣಿಗೆ, ತನ್ನಿಮಿತ್ಯ ಶಿವಾವತಾರಿ, ಪರಿಪೂರ್ಣ ಪರಮಾತ್ಮ ಪರಮಾನಂದ ಸಿದ್ದಪುರುಷನ ನೆನಪಿನಂಗಳದಲ್ಲಿ ಮಹಾಶಿವರಾತ್ರಿ ಮಹಾಮಹೋತ್ಸವ ಹಾಗೂ ಸಾಂಸ್ಕೃತಿಕ ಉತ್ಸವವು 2025 ಫೆಬ್ರುವರಿ 26 ರಿಂದ ಮಾರ್ಚ್ 2 ರ ವರೆಗೆ ವಿವಿಧ ಕಾರ್ಯಕ್ರಮಗಳ ಆಯೋಜನೆ ಮಾಡಲಾಗಿದೆ ಎಂದು ಸಿದ್ಧಾರೂಢ ಭಾರತಿ ಆಶ್ರಮದ ಬಸವಶಾಸ್ತ್ರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವರು ನಿಜಗುಣ ಶಿವಯೋಗಿ ರಾಷ್ಟ್ರೀಯ ಪ್ರತಿಷ್ಠಾನದ ಆಶ್ರಯದಲ್ಲಿ ಐದು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಫೆಬ್ರುವರಿ 26 ರಂದು ಶಿವಯೋಗ ಆಚರಣೆ, ಓಂಕಾರ ಸಪ್ತಾಹ, ಬೆಳಿಗ್ಗೆ 10 ಗಂಟೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆ ಜರುಗುವುದು. 27 ರಂದು ಮಹಾಶಿವರಾತ್ರಿ ಅಮಾವಾಸ್ಯೆ. ಬೆಳಿಗ್ಗೆ 8 ಗಂಟೆಗೆ ಸಿದ್ಧಾರೂಢರ ಪಾರಾಯಣ ನಂತರ 10–30 ಕ್ಕೆ 8, 9, 10 ನೇ ವರ್ಗದ ವಿದ್ಯಾರ್ಥಿಗಳಿಗೆ ವಚನ ಕಂಠಪಾಠ ಸ್ಪರ್ಧೆ ನಡೆಯುವವು. 28 ರಂದು ಮುಂಜಾನೆ 10–30 ಕ್ಕೆ ಸೋಬಾನೆ ಪದಗಳ ಸ್ಪರ್ಧೆ, ಮಾಚ9 1 ರಂದು ಬೆಳಿಗ್ಗೆ 11 ಗಂಟೆಗೆ ವಿವಿಧ ಕಲಾತಂಡಗಳಿಂದ ಗೀ.ಗೀ.ಪದ, ಚೌಡಕಿಪದ, ಹಂತಿಪದ, ರಿವಾಯಿತ ಪದ, ಡೊಳ್ಳಿನ ಕೈ ಪೆಟ್ಟು, ಕರಡಿವಾದನ, ಸಂಬಾಳವಾದನ, ಹಲಗೆವಾದನ, ಡೊಳ್ಳಿನ ವಾಲಗ, ಡೊಳ್ಳು–ಕುಣಿತ, ಸುಗಮ ಸಂಗೀತ ಮುಂತಾದ ಕಲಾ ತಂಡಗಳಿಂದ ವೈವಿಧ್ಯಮಯ ಕಾರ್ಯಕ್ರಮ ಜರುಗುವವು.

ಮಾರ್ಚ 2 ರಂದು ಡೊಳ್ಳಿನ ಪದಗಳ ಸ್ಪರ್ಧೆಗಳು ಜರುಗುವವು. ಈ ಎಲ್ಲ ಸ್ಪರ್ಧೆಗಳಲ್ಲಿ ವಿಜೇತ ಮೂರು ತಂಡಗಳಿಗೆ "ರಾಷ್ಟ್ರೀಯ ಗೌರವ ಪುರಸ್ಕಾರ –2025" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಭಾಗವಹಿಸಿದ ಎಲ್ಲ ಕಲಾವಿದರಿಗೆ ಅಭಿನಂದನಾ ಪತ್ರಗಳನ್ನು ಕೊಡಲಾಗುವುದು. ಬಹುಮಾನ ವಿತರಣೆಯು 2025 ಏಪ್ರಿಲ್ 18 ರಂದು ಶಿವಾನಂದ ಭಾರತಿ ಸ್ವಾಮೀಜಿಯವರ ಸಾನಿಧ್ಯದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪುರ ಅವರ ಸಮ್ಮುಖದಲ್ಲಿ ವಿತರಿಸಲಾಗುವುದು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಆರೂಢ ಜ್ಯೋತಿ, ಸಾಧನ ಸಂಪನ್ನ, ಸಮಾಜಸೇವಾ ಧುರೀಣ, ಜನಪದ ಭೂಷಣ, ಗುರು ಸೇವಾ ರತ್ನ, ಮಾಧ್ಯಮ ಮಿತ್ರ, ಸ್ವರ ಸಾಮ್ರಾಟ್, ರಂಗ ಚೇತನ ಮುಂತಾದ ರಾಜ್ಯಮಟ್ಟದ ಗೌರವ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಕಲಾ ತಂಡದವರು, ಕಲಾವಿದರು, ಸಾಧಕರು ಫೆಬ್ರುವರಿ 25 ರ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9972682938 ಅಥವಾ 9742915714 ಈ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

# "ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಅಡಿಯಲ್ಲಿ 19 ನೇ ಕಂತಿನ ಹಣ ಬಿಡುಗಡೆ" ಕಾರ್ಯಕ್ರಮದ ನೇರ ವೀಕ್ಷಣೆಯ ವರದಿ




**ಬಾಗಲಕೋಟೆ :** ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಜಿಯವರ "ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಅಡಿಯಲ್ಲಿ19ನೇಕಂತಿನಹಣಬಿಡುಗಡೆ"ಯ ನೇರ ಪ್ರಸಾರದ ಕಾರ್ಯಕ್ರಮವನ್ನು 24.02.2025 ರಂದು ಮಧ್ಯಾಹ್ನ 1.00 ಗಂಟೆಗೆ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಶ್ರೀ ಪಿ. ಸಿ. ಗದ್ದಿಗೌಡರ,

ಸನ್ಮಾನ್ಯ ಲೋಕಸಭಾ ಸದಸ್ಯರು, ಬಾಗಲಕೋಟೆ ಅವರು ಉದ್ಘಾಟಿಸಿದರು. ಕಳೆದ 10 ವರ್ಷಗಳ ಕೇಂದ್ರ ಸರ್ಕಾರದ ಅವಧಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಚಟುವಟಿಕೆಗಳ ಕುರಿತು ರೈತರನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಷ್ಟದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಯೋಜನೆಗಳನ್ನು ವಿವರಿಸಿದರು. ಹಾಗೂ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಲು ರೈತರಿಗೆ ತಿಳಿಸಿದರು.

ಈಕಾರ್ಯಕ್ರಮದಲ್ಲಿಶ್ರೀಪಿ.ಎಚ್‌ಪೂಜಾರ, ಮಾನ್ಯ ವಿಧಾನಪರಿಷತ್ ಸದಸ್ಯರು, ಬಾಗಲಕೋಟ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಕೇಂದ್ರ ಸರ್ಕಾರದ ಯೋಜನೆಯಾದ ಕಿಸಾನ ಸಮ್ಮಾನ ಬಗ್ಗೆ ರೈತರಿಗೆ ಆಗುವ ಅನುಕೂಲಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಿದರು.

ಈ ಕಾರ್ಯಕ್ರಮದ ಪ್ರಯುಕ್ತ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ವಿವಿಧ ಕೃಷಿ ಉತ್ಪನ್ನಗಳ ಮಳಿಗೆಗಳನ್ನು ಹಾಕಿ ಬಂದತಹ ರೈತ/ರೈತ ಮಹಿಳೆ ಫಲಾನುಭವಿಗಳಿಗೆ ಗಣ್ಯರಿಂದ ಸನ್ಮಾನ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಡಾ. ಆರ್. ಬಿ. ಬೆಳ್ಳಿ, ಸಹಾಯಕ ವಿಸ್ತರಣ ನಿರ್ದೇಶಕರು ವಿಜಯಪುರ, ಶ್ರೀ ಮಹಾಂತೇಶ ಹಟ್ಟಿ, ಅಧ್ಯಕ್ಷರು, ಜಿಲ್ಲಾ ಕೃಷಿಕ ಸಮಾಜ ಬಾಗಲಕೋಟ, ಡಾ. ಡಿ. ವಿ ಕೋಳೇಕರ್ ಮುಖ್ಯ ವಿಜ್ಞಾನಿಗಳು, ಅಟಾರಿ ಬೆಂಗಳೂರು ಡಾ. ಮಂಜುನಾಥ, ಸಹಾಯಕ ನಿರ್ದೇಶಕರು ಕೃಷಿ ಇಲಾಖೆ, ಡಾ.ಆರ್.ಎ.ನಂದಗಾವಿಹಿರಿಯವಿಜ್ಞಾನಿ ಹಾಗೂ ಮುಖ್ಯಸ್ಥರು, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ, ಇತರ ವಿಜ್ಞಾನಿಗಳು, ಜಿಲ್ಲಾ ಕೃಷಿ ಇಲಾಖೆಯ ಅಧಿಕಾರಿಗಳು, ಬಾಗಲಕೋಟೆ ಮತ್ತು ಇತರ ಗಣ್ಯರು ಭಾಗವಹಿಸಿದ್ದರು. ಎನ್. ಆಯ್. ಸಿ ಸಂಸ್ಥೆಯ ಗಿರಿಯಾಚಾರಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಿ ನೇರ ಪ್ರಸಾರದ ಮಾಹಿತಿಯನ್ನು ಒದಗಿಸಿದರು.

ಸುಮಾರು 317 ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಅಡಿಯಲ್ಲಿ 19 ನೇ ಕಂತಿನ ಹಣ ಬಿಡುಗಡೆ ಕಾರ್ಯಕ್ರಮದ ನೇರ ವೀಕ್ಷಣೆಯ ವೀಕ್ಷಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಡಾ. ಭವ್ಯ ನೇರವೇರಿಸಿದರು.

# ಕರ್ನಾಟಕ ರಾಜ್ಯದ ಸಾರಿಗೆ ಬಸ್ಸಿನ ಕಂಡಕ್ಟರ್ ಮೇಲೆ ಹಲ್ಲೆ ಖಂಡಿಸಿ ಕರ್ನಾಟಕ ಯುವರಕ್ಷಣಾ ವೇದಿಕೆಯ ಪ್ರತಿಭಟನೆ



ಕರ್ನಾಟಕಯುವರಕ್ಷಣಾವೇದಿಕೆಯರಾಜ್ಯಾಧ್ಯಕ್ಷರಾದ ಸುನೀಲ್.ಎಂ.ಎಸ್ ಆದೇಶದಂತೆ ಕೃಷ್ಣರಾಜಪೇಟೆ ತಾಲ್ಲೂಕು ಅಧ್ಯಕ್ಷರಾದ ಜಾವೀದ್ ರವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕರ್ನಾಟಕ ರಾಜ್ಯದ ಸಾರಿಗೆ ಬಸ್ಸಿನ ಕಂಡಕ್ಟರ್ ಮೇಲೆ ಭಾಷಾ ವ್ಯಾಮೋಹದ ನೆಪ ಮಾಡಿಕೊಂಡು ಬಸ್ಸಿನ ಕಂಡಕ್ಟರ್ ಮೇಲೆ ಮಾರಾಣಾಂತಿಕ ಹಲ್ಲೆ ಮಾಡಿದ್ದು ಹಾಗೂ ಕಂಡಕ್ಟರ್ ಮೇಲೆ ಫೋಕ್ಸೋ ಕೇಸ್ ಹಾಕಿರುವ ವಿಚಾರವಾಗಿ ನಮ್ಮ ರಾಜ್ಯದ ಭಾಷೆಯ ಉಳಿವಿಗಾಗಿ ಗುರುವಾರ ಬೆಳಿಗ್ಗೆ ಕೃಷ್ಣರಾಜಪೇಟೆ ಪಟ್ಟಣದ ಟಿಬಿ ಸರ್ಕಲ್ ನಿಂದ ತಾಲ್ಲೋಕು ಕಛೇರಿಯ ವರೆಗೂ ಶಾಂತಿಯುತ ಮೆರವಣಿಗೆ ನೆಡೆಸುವ ಮೂಲಕ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರಿಗೆ ತಲುಪಿಸುವಂತೆ ಕರ್ನಾಟಕ ಯುವರಕ್ಷಣಾ ವೇದಿಕೆಯ ಮೂಲಕ ತಹಸಿಲ್ದಾರ್ ಆಶೋಕ್‌ರವರಿಗೆಮನವಿಪತ್ರವನ್ನುಸಲ್ಲಿಸಲಾಯಿತು, ನಂತರ ಮಾತನಾಡಿದ ಮಹಾರಾಷ್ಟ್ರದ ಗಡಿಭಾಗದಲ್ಲಿ ಪದೇಪದೇ ಕನ್ನಡಿಗರಿಗೆ ಸಮಸ್ಯೆ ನೀಡುತ್ತಾ ಬಂದಿರುವುದು ಅತಿರೇಕದ ವಿಷಯ ಇದೇ ರೀತಿ ಮುಂದುವರಿದಲ್ಲಿ ಕರ್ನಾಟಕದಾದ್ಯಂತ ಉಗ್ರ ಪ್ರತಿಭಟನೆ ನೆಡೆಸಲಾಗವುದು ಆಗಾಗಿ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರು ಈ ವಿಚಾರದ ಬಗ್ಗೆ ಶೀಘ್ರವೇ ಕ್ರಮ ಕೈಗೊಳ್ಳುವಂತೆ ತಹಸಿಲ್ದಾರ್ ಆಶೋಕ್ ರವರಿಗೆ ಮನವಿ ಸಲ್ಲಿಸುವ ಮೂಲಕ ಸರ್ಕಾರಕ್ಕೆ ಒತ್ತಡ ನೀಡಿದರು,

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷರಾದ ಜಾವೀದ್.ತಾಲೋಕು ಉಪಾಧ್ಯಕ್ಷರಾದ ಮೋಹನ್. ನಿಸಾರ್ ಅಹಮ್ಮದ್.ಹನುಮೇಗೌಡ. ಮಂಜುನಾಥ್.ಪುರುಷೋತ್ತಮ್.ಹಸೇನ್. ದೇವರಾಜ್.ನಾಸೀರ್.ಉದ ಯ್ ಪರಮೇಶ್ ನಿರಂಜನ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State